FIRST BOOK OF LESSONS

(CANARESE)

BY

L. GARTHWAITE

PUBLISHED BY ORDER OF THE DIRECTOR OF PUBLIC INSTRUCTION, MADRAS

ಅಪ್ಪಣೆಯ ಮೇರೆಗೆ

ಸರ್ಕಾರಿ ಪಾಠಶಾಲೆಗಳ ಪ್ರಯೋಜನಕ್ಕಾಗಿ, ಗಾರ್ತುವೇಟು ಧೊರೆ ರಚಿಸಿದ

ಕನ್ನಡ ಪಾಠಗಳ

ಮೊದಲನೆ ಪುಸ್ತಕವು

ಈಗ ನಡೆಯುವ ಹಣ

ಪೈ.					
೧೨	೧ ಅಣೆ.				
೧೯೨	೧೬	„	೧ ರೂಪಾಯಿ.		
೭೬೮	೬೪	„	೪	„	೧ ವರಹ.

MANGALORE
GOVERNMENT SCHOOL-BOOK DEPOT
PRINTED BY PLEBST & STOLZ, BASEL MISSION PRESS
1868

ಸಾಧಾರಣವಾಗಿ ಬರಹವನ್ನು ಹುಡುಗರಿಗೆ ಕಲಿಸುವದರಲ್ಲಿ ಮುಟ್ಟಮೊದಲು ವರ್ಣಾಕ್ಷರಗಳನ್ನು ಕಲಿಸುತ್ತಾರೆ. ಬಳ್ಳಿಯಲ್ಲಿ ಸುಮಾರು ಆರು ಏಳು ನೂರು ಅಕ್ಷರಗಳು ಕಲಿಯಲಿಕ್ಕೆ ಉಂಟು. ಇದನ್ನೆಲ್ಲಾ ಕಲಿತನಂತರ ಮಾತ್ರವೇ ಮಾತುಗಳನ್ನು ಓದ ತೊಡಗಿಸುತ್ತಾರೆ. ಆದ ಕಾರಣ ಒಬ್ಬ ಹುಡುಗನು ಚನ್ನಾಗಿ ಓದ ಕಲಿಯುವ ಮೊದಲು ಒಂದು ವರುಷ ಕಳದು ಹೋಗುವದು ಅಸಾಧಾರಣವಾದ ಕಾರ್ಯವಲ್ಲ. ಈ ವಿಷಯದಲ್ಲಿ ತಿದ್ದುಪಾಟು ಮಾಡಲಿಕ್ಕೆ ನಾವು ಈ ಪುಸ್ತಕವನ್ನು ರಚಿಸಿದ್ಧೇವೆ. ಮುಂಚೆ ಒಂದೇ ಅಕ್ಷರವನ್ನಾದರೂ ಕಲಿಯದಿದ್ದ ಒಬ್ಬ ಹುಡುಗನು ಈ ಪುಸ್ತಕದಿಂದ ವಿದ್ಯೆ ಕಲಿಯ ಪ್ರಾರಂಭ ಮಾಡಿದರೆ ಎರಡು ಮೂರು ತಿಂಗಳೊಳಗೆ ಚನ್ನಾಗಿ ಓದಲಿಕ್ಕೆ ಸಾಮರ್ಥ್ಯ ಉಳ್ಳವನಾಗ ಬಹುದು.

ಈ ಪುಸ್ತಕವನ್ನು ಕಲಿಸುವ ಕ್ರಮ ಹ್ಯಾಗಂದರೆ:—ಒಂದೊಂದು ಪಾಠಕ್ಕೆ ಒಂದು ಎರಡು ಅಕ್ಷರಗಳನ್ನು ಮಾತ್ರ ಕಲಿಸುವದು. ಹುಡುಗನು ಅವುಗಳನ್ನು ಕಲಿತ ಮೇಲೆ ಅವುಗಳಿಂದಾದ ಮಾತುಗಳನ್ನು ಓದಲಿಕ್ಕೆ ಕಲಿಸ ಬೇಕು. ಅಂಥಾ ಮಾತುಗಳು ಆ ಪಾಠಗಳ ಮೊದಲನೇ ಎರಡು ಮೂರು ಪಂಙ್ತಿಗಳಲ್ಲಿ ಬರದವೆ. ಮುಂಚೆ ಕಲಿಸದ ಅಕ್ಷರಗಳು ಯಾವದೊಂದು ಪಾಠದಲ್ಲಿಯೂ ಶಿಕ್ಕುವದಿಲ್ಲ. ವ್ಯಂಜನ ಅಕ್ಷರಗಳು ಬರುವ ಪಾಠಗಳಲ್ಲಿ ಆಯಾ ವ್ಯಂಜನಗಳ ಒತ್ತನ್ನು ಕಲಿಸ ಬೇಕು. ಸ್ವರ ಅಕ್ಷರಗಳು ಬಂದರೆ, ಹಿಂದಿನ ಪಾಠಗಳಲ್ಲಿ ಬಂದ ಎಲ್ಲಾ ವ್ಯಂಜನಗಳಿಗೆ ಅವುಗಳನ್ನು ಶೇರಿಸುವ ಕ್ರಮವನ್ನು ಸಹಾ ಕಲಿಸ ಬೇಕು. ಉಪಾಧ್ಯಾಯರಿಗೆ ಬೇರೆ ತರಗತಿಯ ಹುಡುಗರನ್ನು ಕಲಿಸುವ ಕೆಲಸವಿದ್ದರೆ, ಅಕ್ಷರಗಳನ್ನೂ ಮಾತುಗಳನ್ನೂ ಕಲಿತ ಹುಡುಗನನ್ನು ಮಿಕ್ಕಾದ ಪಾಠವನ್ನು ತನ್ನಷ್ಟಕ್ಕೆ ತಾನೆ ಕಲಿಯಲಿಕ್ಕೆ ಕಳುಹಿಸ ಬಹುದು. ಮತ್ತು ಹುಡುಗರಿಗೆ ಒಂದು ಪಾಠವನ್ನು ಓದ ಕಲಿಸುತ್ತಾ ಇರುವಲ್ಲಿ ಆ ಪಾಠವನ್ನು ಹ್ಯೊಗೆಯ ಮೇಲಾಗಲಿ ಹಲಿಗೆಯ ಮೇಲಾಗಲಿ ಬರಿಯಲಿಕ್ಕೂ ಕಲಿಸ ಬೇಕು.

ಒಂದೊಂದು ಪಾಠಕ್ಕೆ ಬರದಿಟ್ಟಿರುವ ಕನ್ನಡ ಇಂಗ್ಲಿಷ ಅಂಕೆಗಳಿಂದ ಅಂಕೆಗಳ ರೂಪವನ್ನೂ ಹೆಸರುಗಳನ್ನೂ ಕಲಿಸ ಬಹುದು.

ಕಡೆಯಲ್ಲಿ ಬರುವ ಪಾಠಗಳಲ್ಲಿ ಬುದ್ಧಿ ವೃದ್ಧಿಗೆ ತಕ್ಕ ಅನೇಕ ವಿದ್ಯಮಾನಗಳೂ ವಿಶೇಷವಾದ ಕಥೆಗಳೂ ಉಂಟು. ಇವುಗಳನ್ನು ಕುರಿತು ಉಪಾಧ್ಯಾಯನು ಹುಡುಗರ ಸಂಗಡ ಪ್ರಶ್ನೆ ಕೇಳಿ ಉತ್ತರ ತೆಗದು ಕೊಳ್ಳ ಬೇಕು. ಮುಟ್ಟಮೊದಲಿನಿಂದಲೇ ಎಲ್ಲಾ ಮಾತುಗಳ ಅರ್ಥವನ್ನು ಕುರಿತು ಹುಡುಗರ ಸಂಗಡ ಮಾತಾಡ ಬೇಕು. ಹುಡುಗನು ಅನ್ನ ಎಂಬುವ ಮಾತು ಓದಿ ಹೇಳುವಾಗ್ಯೆ ಉಪಾಧ್ಯಾಯನು ಅನ್ನ ಯಾತಕ್ಕೆ? ಬೇಯಿಸುವದಕ್ಕಿಂತ ಮುಂಚೆ ಅದಕ್ಕೆ ಏನು ಹೇಳುತ್ತಾರೆ? ಎಲ್ಲಿ ಬೆಳೆಯುತ್ತದೆ? ಮತ್ತು ಹೀಗೆ ಕೇಳ ಬೇಕು.

ಹ್ಯಾಗಾದರೂ ಪಾಠದಲ್ಲಿ ಬರದಿರುವ ಅಕ್ಷರಗಳನ್ನು ಹೊರತಾಗಿ ಯಾವ ಅಕ್ಷರವನ್ನಾದರೂ ಕಲಿಸ ಕೂಡದು. ಈ ಪುಸ್ತಕ ಮುಗಿದ ಮೇಲೆ ಹುಡುಗರಿಗೆ ವಿಶಿಷ್ಠ ಅಕ್ಷರಗಳು ಚನ್ನಾಗಿ ಗೊತ್ತಾಗುವವು.

ಈ ಪುಸ್ತಕ ಹುಡುಗರಿಗೆ ಓದ ಕೊಡುವ ಮೊದಲು ಈ ಕೆಳಗೆ ಕಾಣಿಸಿದ ತಪ್ಪುಗಳನ್ನು ಕೈಯಿಂದ ತಿದ್ದಿ ಬರದು ಕೊಡ ಬೇಕು.

ಪುಟ.	ಪಂಙ್ತಿ.	ತಪ್ಪು.	ಸಮ.
6	11	ನಮ್ಮ	ನನ್ನ
7	4	ನಮ್ಮ	ನನ್ನ
8	6	ಮೂರು ಮೂರು ಆರಾಗುವದು	ಅದು ಅವ ಇತ್ತ ಕೆತ್ತೆ
9	4	ಇಡಲಾಗದು	ಇಡುವದು ಆಗದು
,,	5	ಮೂವರು	ಆರು
,,	10	ಎಂದಾದರೂ	ಎಂದಾದರು
13	23	ಕೈಯ್ಯಾ	ಕಯ್ಯಾ

೧. ಅ ಇ ದು 1.

ಇದು	ಅದು	ಅದು	ಇದು

೨. ವ 2.

ಅದು	ಅವ	ಇದು	ಇವ
ಇವ	ಅದು	ಅವ	ಇದು

೩. ನ 3.

ವನ.	ಇದು ವನ.
ಅವನ.	ಅವನದು.
ಅದು ವನ.	ವನ ಇದು.
ಇವನ	ಇವನದು.
ಇದು ಅವನದು.	ಅದು ಇವನದು.
ಅದು ಅವನದು.	ಇದು ಇವನದು.
ಅವನದು ಇದು.	ಇವನದು ಅದು.

೪. ನ್ನ 4.

ಅನ್ನ.	ಅನ್ನ ಇದು.
ನನ್ನ.	ನನ್ನ ಅನ್ನ.
ಅದು ಅನ್ನ.	ಅವನ ಅನ್ನ.
ಇವನ ಅನ್ನ.	ಇದು ಇವನ ಅನ್ನ.
ಅದು ನನ್ನ ಅನ್ನ.	ನನ್ನ ಅನ್ನ ಇದು.
ಅನ್ನ ಅವನದು.	ವನ ಇದು.
ನವ ಅನ್ನ ಇದು.	ಅನ್ನ ಇವನದು.
ಇವನ ಅನ್ನ ಇದು.	ಅವನ ಅನ್ನ ಅದು.

೫. ತಾ 5.

ಅದು ತಾ.
ಅನ್ನ ತಾ.
ನನ್ನ ಅನ್ನ ಅದು, ತಾ.
ಇವನ ಅನ್ನ ತಾ.
ಅನ್ನ ನನ್ನದು, ತಾ.
ಅವನ ಅನ್ನ ತಾ.
ಇದು ತಾ.
ನನ್ನ ಅನ್ನ ತಾ.
ತಾ, ನನ್ನ ಅನ್ನ.
ಅದು ಅವನ ಅನ್ನ.
ಅದು ನನ್ನದು, ತಾ.
ಅದು ವನ.

೬. ಆ 6.

ಆ ಅನ್ನ.
ಆ ಅನ್ನ ನವ ಅನ್ನ.
ಆ ಅನ್ನ ತಾ.
ಆ ಆ, ನನ್ನ ಅನ್ನ.
ಇವನದು ತಾ.
ಅವನದು ಅದು.
ಆ ಅನ್ನ ಅವನ ಅನ್ನ.
ಆ ವನ.
ಆ ಅನ್ನ ನನ್ನದು.
ಆ ಅನ್ನ ಅವನದು.
ನನ್ನದು ಅದು, ತಾ.
ಆ ಅನ್ನ ನನ್ನದು, ತಾ.
ಇವನದು ಇದು.
ಆ ಅನ್ನ ಇವನದು.

೭. ನಿ ನೀ 7.

ನಿನ್ನ.
ಇದು ನಿನ್ನದು.
ನಿನ್ನ ಅನ್ನ ತಾ.
ಇದು ನನ್ನದು, ಅದು ನಿನ್ನದು.
ಆ ಅನ್ನ ಇವನದು, ತಾ.
ಆ ನವ ಅನ್ನ ನನ್ನದು.
ತಾ ನೀ ನಿನ್ನದು.
ಅದು ತಾ, ನೀ.
ನಿನ್ನದು.
ಆ ಅನ್ನ ನಿನ್ನದು.
ನೀ ತಾ.
ನೀ ನಿನ್ನದು ತಾ.
ನಿನ್ನದು ಇದು, ನನ್ನದು ಅದು.
ನೀ ನಿನ್ನ ಅನ್ನ ತಾ.
ತಾ ನೀ, ನವ ಅನ್ನ.
ಆ ಅನ್ನ ನೀ ತಾ.

೮. ವ ವ್ವ 8.

ಅವ್ವ.
ಅವ್ವ ತಾ.
ಇವನ ಅವ್ವ.
ಅವ್ವ, ಇದು ವನ.
ಇದು ಅವ್ವನ ಅನ್ನ.
ಅವ್ವ, ನನ್ನ ಅನ್ನ ತಾ.
ನನ್ನದು ತಾ, ಅವ್ವ.

ನನ್ನ ಅವ್ವ.
ಅವನ ಅವ್ವ.
ಅವ್ವ, ಅನ್ನ ತಾ.
ನನ್ನ ಅನ್ನ ಇದು, ಅವ್ವ.
ಆ ಅನ್ನ ಅವ್ವನದು.
ಅವ್ವ, ತಾ, ನೀ.
ನೀ ನನ್ನ ಅವ್ವ.

೯. ಳ ಳ್ಳ 9.

ತಾಳ | ಅವಳ | ಇವಳ | ತಾಳ ತಾ

ಇವಳ ತಾಳ.
ನನ್ನ ತಾಳ ತಾ.
ಇದು ಅವಳದು.
ನೀ ನಿನ್ನ ತಾಳ ತಾ.
ಇವಳ ಅನ್ನ.
ಅವಳದು ಆ ತಾಳ.

ಅವಳ ತಾಳ.
ತಾಳ ಇದು.
ಅದು ಇವಳದು.
ಅವಳದು ತಾ.
ಆ ಅನ್ನ ಅವಳದು.
ಇವಳದು ಆ ಅನ್ನ.

೧೦. ದ ದ್ದ 10.

ದನ | ದಳ | ವನದ | ವದನ | ಇದ್ದ

ಇದು ಅವ್ವನ ದನ.
ಅವ್ವನ ವದನ.
ಇದ್ದ ದನ ಅದು.
ಆ ದನ ವನದ ದನ.
ಆ ಅನ್ನ ದಳದವನದು.
ಆ ಅನ್ನ ದನದವನ ಅನ್ನ.

ಆ ದನ ನನ್ನ ದನ.
ವನದ ದನ ಅದು.
ಅದು ಅವನ ದಳ.
ಅವ ದಳದವ.
ಇದ್ದ ದಳ.
ಅವ ವನದವ.

೧೧. ಕ ಕ್ಕ 11.

ಕಳ್ಳ ಕದ ಕದ್ದ ಕಕ್ಕ.
ಅವ ಕಳ್ಳ.
ಇದು ಕದ.
ನೀ ನನ್ನ ಅಕ್ಕ.
ಕದ್ದ ಅನ್ನ ಇದು.
ನಳ ಇದ್ದ ವನ ಅದು.
ಅವ ನಕ್ಕ.
ಅಕ್ಕನ ಅನ್ನ ನೀ ತಾ.
ಅವ ನನ್ನ ಕಕ್ಕ.
ಇದ್ದ ಅನ್ನ ಅಕ್ಕನದು.
ಅದು ಕಕ್ಕನ ದನ.

ಅಕ್ಕ ನಕ್ಕ ಆಕಳ.
ಅಕ್ಕ, ನನ್ನ ಅನ್ನ ತಾ.
ಕದ್ದ ಅನ್ನ ದನದವನದು.
ಅವ ಆಕಳ ಕದ್ದ.
ಅಳದವ ಕಳ್ಳ.
ತಾ ನೀ ಅಕ್ಕನದು.
ಕದ ಅದು.
ನಕ್ಕವ ಅವ.
ಕಕ್ಕನ ಅನ್ನ ತಾ ನೀ.
ಆಕಳ ಕದ್ದವ ಅವ.
ನಿನ್ನ ಕಕ್ಕ ಅವ.

೧೨. ಕ ದ ದ್ದ ನ ವ ಳ 12.
ಕು ದು ದ್ದು ನು ವು ಳು ಉ

ಉದ್ದ	ತಾಳವು	ಅವನು	ತಾನು	ಅಳುವದು
ಉದ್ದು	ಇದ್ದನು	ಇವನು	ಉಳು	ಕಳುವದು

ಇದು ಉದ್ದು, ಅದು ತಾಳವು.
ಅಳುವವಳು ನಿನ್ನ ಅಕ್ಕ.
ಅದು ನನ್ನ ಅಕ್ಕನ ತಾಳವು.
ಅವನು ಉದ್ದ ಇದ್ದನು.
ನಿನ್ನ ಕಕ್ಕ ನಕ್ಕನು.
ನೀನು ಅದನ್ನು ಉದ್ದು.
ಆ ಅವ್ವ ನಿನ್ನ ಅವ್ವ.
ಇದ್ದದು ನನ್ನದು.

ನಿನ್ನ ದನ ಉಳುವದು.
ಉಳದದ್ದು ಕಕ್ಕನದು.
ಅಳುವವನು ಕಳ್ಳು ಕದ್ದವನು.
ನಿನ್ನ ಅಕ್ಕ ಇದ್ದಳು.
ನಕ್ಕದ್ದು ನನ್ನ ಅವ್ವ.
ಉಳುವ ದನ ನನ್ನದು.
ಅವನು ಅದನ್ನು ತಾಳುವನು.
ಅದು ನಿನ್ನ ಆಕಳು.

೧೩. ಪ ಪ್ಪ ಪು ಪ್ಪು 13.

ಪದ	ಅಪ್ಪ	ಕಪ್ಪು	ಉಪ್ಪು	ದಪ್ಪ

ಇದು ದಪ್ಪ.
ಅವನು ಅದನ್ನು ಕಳದನು.
ಕಕ್ಕನು ತಾಪ ತಾಳನು.
ಅಳುವವನು ಕಳ್ಳನು.
ಅಪ್ಪ, ಉಪ್ಪು ತಾ.
ಅಪ್ಪ, ನೀ ಅನ್ನ ಉಪ್ಪು ತಾ!
ನನ್ನ ಅಕ್ಕನ ಉಪ್ಪು ತಾ ನೀ.
ಅಪ್ಪ ಇದ್ದ ಅನ್ನ ತಾ.
ಇವನು ನಿನ್ನ ಅಪ್ಪ.
ಅದು ದಪ್ಪ ಕದ.

ಅದು ಕಪ್ಪು.
ಅದು ಅಪ್ಪನ ಆಕಳು.
ಅಪ್ಪನ ವದನ.
ಅದು ಅಕ್ಕನ ಉಪ್ಪು.
ಉಳುವ ದನ ಅಪ್ಪನದು.
ಅವನ ಕಕ್ಕನು ಉದ್ದ.
ಅಳದ ಉಪ್ಪು ಇದು.
ಆ ಆಕಳು ನೀ ತಾ.
ಅವಳು ತಾಪವನ್ನು ತಾಳಳು.
ಆ ಆಕಳು ಕಪ್ಪು.

೧೪. ತ ತ್ತಾ ತು ತ್ತು 14.

ತನ್ನ	ತಾತ	ದತ್ತ	ಅತ್ತನು	ತುಪ್ಪ	ನತ್ತು
ಇತ್ತನು	ತುತ್ತು	ತುಳು	ಅತ್ತಳು	ಉತ್ತನು	ಇತ್ತ

ಅಪ್ಪನು ತುತ್ತು ಅನ್ನ ಇತ್ತನು.
ನೀ ನನ್ನ ತುಪ್ಪವನ್ನು ತಾ.
ಅದು ನನ್ನ ಅಪ್ಪನ ಆಕಳು.
ಅಕ್ಕನ ನತ್ತು ಇತ್ತ ತಾ ನೀ.
ಅದು ಅವನ ತಾತ ಇತ್ತ ಅನ್ನ.
ಆ ಉಪ್ಪು ಇತ್ತ ತಾ.
ಅವನ ಕಕ್ಕನು ಅತ್ತನು.
ನೀ ನನ್ನ ಆಕಳ ತಾ.
ಅಕ್ಕನು ನತ್ತನ್ನು ಕಳದಳು.

ಅವನ ಅಕ್ಕ ಅತ್ತಳು.
ಇದು ಕದ್ದ ತುಪ್ಪ.
ಅಕ್ಕ ಉಪ್ಪು ಅನ್ನ ಇತ್ತಳು.
ಅಪ್ಪ ನೀ ನನ್ನ ಅನ್ನ ತಾ.
ಅದು ದತ್ತ ಅನ್ನ.
ಕಳ್ಳನು ನತ್ತನ್ನು ಕದ್ದನು.
ಅದನ್ನು ಕದ್ದವ ಅವ.
ಆ ದನ ಕಪ್ಪು ದನ.
ಅದು ಕಳದ ನತ್ತು.

೧೫. ಈ ಗ 15.

ಆಗ	ನಗ	ತಾಗದು	ಈತನು	ದನಗಳು

ಅಪ್ಪ, ಈ ತುಪ್ಪ ಅನ್ನ ತಾ.
ಈ ನತ್ತು ನನ್ನ ಅಕ್ಕ ಇತ್ತದ್ದು.
ನೀ ಕದ್ದ ತುಪ್ಪ ಅದು.
ಈ ತುಪ್ಪ ಅನ್ನದ ತುತ್ತು ತಾ.
ಅನ್ನ ಇದ್ದದು ನೀ ತಾ.
ಅದು ನನ್ನ ಕಕ್ಕನ ನಗ.
ಆಕಳು ಆಗ ಇತ್ತು.
ದಪ್ಪ ಕದ ಅದು.
ಆ ನಗ ಕಳದ ನಗ.
ಅದು ತಾಗದು.

ಅಪ್ಪ ಆ ಅನ್ನ ಈಗ ಇತ್ತನು.
ಅಕ್ಕನು ಈ ತಾಳವ ಇತ್ತಳು.
ಈಗ ಈ ತುತ್ತು ಅನ್ನ ತಾ.
ಈ ನತ್ತು ನಿನ್ನ ಅಕ್ಕನದು.
ಈತನು ನಿನ್ನ ಕಕ್ಕ.
ಅದನ್ನು ಈಗ ಇತ್ತನು.
ಆ ನಗವನ್ನು ಅವನು ಕಳದನು.
ಈ ನಗ ಕಳದದ್ದು.
ಅವು ನಮ್ಮ ಕಪ್ಪು ದನಗಳು.
ಅವು ನನ್ನ ನಗಗಳು.

೧೬. ಕ ತ ದ ನ ಪ ವ ಳ ಗ ಾ 16.

ಕಾ ತಾ ದಾ ನಾ ಪಾ ವಾ ಳಾ ಗಾ

ಕಾಳು	ದಾತ	ಪಾಪ	ವಾರ	ನಾತ	ತಾಪ
ತಾತ	ನಾನಾ	ಪಾನ	ಗಾಳ	ಆದದ್ದು	ಪಾದ

ಈತನು ನನ್ನ ತಾತನು.
ಅವನು ಆಕಳ ದಾನ ಇತ್ತನು.
ನೀನು ಕಪ್ಪು ಆಳು.
ಅವನು ಆಗ ನನ್ನನ್ನು ಕಾದನು.
ಈತನ ದನವನ್ನು ನೀ ತಾ.
ಆ ನಗವನ್ನು ಕದ್ದದ್ದು ನೀ.
ನೀನು ಈಗ ನನ್ನ ದಾತನು.
ನಾನಾ ಪಾನಗಳು ಉತ್ತಮ.

ಅದು ಅವಳ ಗಾಳವು.
ದಪ್ಪವಾದ ಕದ ಅದು.
ಅವನ ಪಾದವು ಕಪ್ಪಾದದ್ದು.
ಆತನು ಉದ್ದ ಆಳು.
ಅದು ಉದ್ದವಾಗದು.
ನೀನು ಆ ಉದ್ದ ಕಾಳು ತಾ.
ಇದು ಅಪ್ಪನ ನಗ.
ಅವನು ಅದನ್ನು ಅಗದನು.

೧೭. ರ ರಾ ರು 17.

ತಾರ	ದಾರ	ಇರವು	ನಾರು	ತರ	ದರ	ಆರು

ಅಪ್ಪನ ಇರವು ನನ್ನ ಇರವು.
ನೀ ಇವುಗಳನ್ನು ವಾರ ವಾರ ತಾ.
ದುರುಳತನವು ಪಾಪವು.
ಇದು ನನ್ನ ಅಕ್ಕನ ದಾರ.
ಇದರ ತಪ್ಪು ಆರು ಆಗುವದು.
ಕಕ್ಕನು ಈ ತುಪ್ಪ ತರುವನು.
ಅವನನ್ನು ನೀನು ತಳ್ಳು.
ಅದು ನನ್ನ ಅಪ್ಪನ ನಗ.
ಆ ಅಗಳು ಆಳವಾದದ್ದು.
ಅದರ ದರ ಆರು ತಾರ.

ನೀ ಅಪ್ಪನ ನಾರು ತಾ.
ನಮ್ಮ ಕಾಗದಗಳು ಕಪ್ಪು.
ಅವನು ಈಗ ಅದನ್ನು ಕದ್ದವನು.
ನಿನ್ನ ತಾತನು ನಕ್ಕನು.
ಆತನು ನಿನ್ನನ್ನು ಕರದನು.
ಉದು ಉದ್ದವಾದ ನಾರು.
ಅದು ನಿನ್ನ ಅಪ್ಪನ ನಗ.
ನೀ ಅಕ್ಕನ ತಾರ ಇತ್ತ ತಾ.
ಈ ಕತ್ತವನ್ನು ಈಗ ನೀ ತಾ.
ಆ ದಾರಿ ಆರು ಗಾವುದ.

೧೮. ಮ ಮಾ ಮು ಮ್ಮ 18.

ಮಗ	ತಮ್ಮ	ಉತ್ತಮ	ಮಾದಳ	ಮುದ್ದು	ತಮ್ಮ
ಮರ	ರಾಮ	ಮಾತು	ಮುತ್ತು	ಮಾವ	ಮಾರು

ಪಾಪವು ಮಾನವನ್ನು ತಾರದು.
ಅದನ್ನು ನಿನ್ನ ಮಗನು ಕದ್ದನು.
ಅದು ಮಾವನ ಮುತ್ತು.
ನಿನ್ನ ಆಕಳನ್ನು ಮಾರು.
ಈ ಗಾಳ ನನ್ನ ತಮ್ಮನದು.
ನಮ್ಮ ಕರುವನ್ನು ನಾವು ತರುವ.
ಪಾಪ ಅಪಮಾನ ತರುವದು.
ರಾಮಾ, ನೀನು ಉತ್ತಮನಾಗು.

ನಮ್ಮ ಮಾದಳ ಉತ್ತಮವು.
ಅವಳು ನನ್ನ ಮುದ್ದು ಅಕ್ಕ.
ಅಮ್ಮ, ತಮ್ಮನ ಗಾಳ ತಾ.
ಅವನು ರಾಮನ ಕಕ್ಕ.
ಇವನು ನಿನ್ನ ಮಗನು.
ಮುದ್ದು ರಾಮಾ, ಮುತ್ತು ತಾ.
ಈ ಮರದ ಮಾವು ನೀ ತಾ.
ಅದು ಉದ್ದ ಆಗುವದು.

ಉತ್ತಮ ಮಾತು ಅಪವಾದ ತಾರದು. | ಆ ಕಳ್ಳನು ಅತ್ತನು.

೧೯. ಎ ಕೆ ಗೆ ತೆ ದೆ ನೆ ಪೆ ಮೆ ರೆ ವೆ 19.

ಎತ್ತು | ನಾವೆ | ಆವೆ | ಇಪ್ಪೆ | ರೆಪ್ಪೆ | ಕಾಗೆ | ಗದ್ದೆ | ಕೆತ್ತೆ

ರೆಪ್ಪೆ ಮುದುರುತ್ತದೆ.
ರಾಮನ ಗಾಳ ಎರವು ತಾ.
ಕಕ್ಕನು ನಿನ್ನನ್ನು ಕಾದನು.
ಮೂರು ಮೂರು ಆರಾಗುವವು.
ಅದು ಆಳವಾದ ಅಗಳತೆ.
ಅದು ಉತ್ತಮವಾದ ನಾವೆ.

ಇದು ಕಪ್ಪು ಕಾಗೆ.
ನಮ್ಮ ಕಕ್ಕ ಆವೆ ತರುವನು.
ಅದು ಆ ಮರದ ಕೆತ್ತೆ.
ನಿನ್ನ ನಾಮ ಪರಮ ಉತ್ತಮ.
ಅದು ಮಾವನ ಗದ್ದೆ.
ನಿನ್ನ ತಮ್ಮನು ಉದ್ದವಾಗನು.

ನಿನ್ನ ಮುತ್ತಪ್ಪನ ಆಕಳು ಉದ್ದವಾಗದು.
ಅಕ್ಕ, ಈ ಇಪ್ಪೆ ಮರವು ಮತ್ತು ಆಲದ ಮರವು ಕಕ್ಕನದು.
ನನ್ನ ಮಾವನ ಮಗನ ಎತ್ತು ಎತ್ತರವಾದದ್ದು.
ತಮ್ಮನು ಅಮ್ಮನ ಮಾತು ಮರೆತು ಕಳೆದನು.

೨೦. ಡ ಡಾ ಡು ಡಿ ಡೆ ಡ್ಡ 20.

ತಡ | ಮಾಡದೆ | ಎರಡು | ನಡು | ದಡ್ಡ | ಮಾಡು | ನಡುವೆ

ತಡ ಮಾಡದೆ ಇರು.
ಅವನು ಅರುವೆ ಕಳದನು.
ಎರಡು ಮಾವು ನನ್ನದು.
ಅವನು ಈಗ ಮಾವನ ಮಗನು.
ಇವನು ಅವನ ನಡುವೆ ಇದ್ದನು.
ಅದು ಉತ್ತಮವಾದ ಆಕಳು.
ಅದು ನಮ್ಮ ದನದ ಕರು.

ಅವನು ಈಗ ಮಾತಾಡುತ್ತಾನೆ.
ಇವನು ಈ ಮರ ನಡುವನು.
ಅವನ ತಮ್ಮ ದಡ್ಡನು.
ಆ ಮರ ನಡುವೆ ಇರುವದು.
ಇದು ಆಳವಾದ ಕೆರೆ.
ಅವರು ಮೂವರು ಕಳ್ಳರು.
ರಾಮನು ಮದ ಉಳ್ಳವನು.

ತಮ್ಮಾ, ಅಕ್ಕನ ನತ್ತು ಮತ್ತು ನನ್ನ ಕಪ್ಪು ಅರುವೆ ತಾ.
ಮಕ್ಕಳು ದುರುಳತನ ಮಾಡುವದು ಆಗದು.
ಉತ್ತಮನಾದ ಮಗನು ಅಪ್ಪನ ಮಾತು ಮಾಡುವನು.

೨೧. ಂಕ ಂಗ ಂತ ಂದ ಂಪ ಂಮ 21.

ತಂದು	ತಂದೆ	ತೆಂಗು	ದಂಡ	ದುಂಡು	ತಂಗಳ	ತಂಪು
ತಂದನು	ತೆಂಕು	ಆನಂದ	ವಂದನೆ	ಉಂಡು	ಅಂಕೆ	ಅಂತು

ಅಂಕೆ ತಪ್ಪು ಇಡಲಾಗದು.
ಮೂವರು ಕುರುಡರು ಇದ್ದರು.
ಅವರು ದಂಡ ತೆಗದರು.
ರಾಮನು ತಂಗಳ ಅನ್ನ ತರುತ್ತಾನೆ.

ನಿನ್ನ ತಂದೆಗೆ ವಂದನೆ ಮಾಡು.
ಅದು ನಮ್ಮ ತೆಂಗು.
ಆ ಮರ ದುಂಡಾದದ್ದು.
ಆ ನೀರು ತಂಪಾದ ನೀರು.

ಅವನು ನಾನಾ ತರದ ಗಡಿಗೆಗಳನ್ನು ತಂದನು.
ನನ್ನ ಮಾವನು ಉಂಡು ಕೆಮ್ಮುತ್ತಾ ಇರುತ್ತಾನೆ.
ಅಪವಾದದ ಮಾತುಗಳನ್ನು ಎಂದಾದರೂ ಆಡದೆ ಇರು.
ಅಮ್ಮ ಅನ್ನ ಮಾಡುತ್ತಾ ಇರುವಾಗ ಕಕ್ಕನು ಆಕಳ ತಂದನು.
ಅದಕ್ಕೆ ನನ್ನ ತಮ್ಮನು ಮತ್ತು ಅಕ್ಕನು ಆನಂದ ಪಡುತ್ತಾರೆ.
ನಿನ್ನೆ ಕಳ್ಳನು ಕಾದು ಇದ್ದು ಅಮ್ಮ ತಂದ ನಗಗಳನ್ನು ಕದ್ದನು.

೨೨. ಕಿ ಗಿ ತಿ ದಿ ನಿ ಪಿ ಮಿ ರಿ ವಿ ಳಿ 22.

ಕಿತ್ತು	ಗಿಡ	ದಿನ	ತಿನ್ನು	ಮಿತ	ಪಿತ್ತ	ಮರಿ	ತಿಳಿ	ದಿಕ್ಕು
ಆಡಿನ	ಗಿಡ್ಡ	ಆಗಿ	ತಿದ್ದ	ವಿರಳ	ತಿನ್ನಿರಿ	ಮುಂದಿ	ಕಿರಿ	ಆದದರಿಂದ

ಆ ಗಿಡವನ್ನು ಕಿತ್ತು ತಾ.
ನೀನು ಅದನ್ನು ಮಿತವಾಗಿ ತಿನ್ನು.
ತಿಳಿ, ಅದು ಆಡಿನ ಮರಿ.
ಅವನ ಕಾಗದ ಕಿರಿದು.
ಅದರ ತಪ್ಪುಗಳನ್ನು ನೀನು ತಿದ್ದು.

ತಮ್ಮ ಕತ್ತನ್ನು ದಿನದಿನ ತಿನ್ನುತ್ತಾನೆ.
ಅದರಿಂದ ಪಿತ್ತವಾಗುವದು.
ಇವುಗಳನ್ನು ವಿರಳವಾಗಿ ಇಡು.
ನನ್ನ ಕಕ್ಕನು ಗಿಡ್ಡನಾಗಿರುತ್ತಾನೆ.
ತೆಂಕು ದಿಕ್ಕು ಇದು.

ರಾಮನಿಗೆ ಅವನ ಅಮ್ಮನು ದಪ್ಪವಾದ ಕತ್ತು ಇತ್ತಳು. ಅವನು ಅದನ್ನು ಆಗ ಈಗ ಅನ್ನದೆ ತಿಂದು ನೀರು ಕುಡಿದನು. ಅದರಿಂದ ಅವನಿಗೆ ಕೆಡಕು ಆಗಿ ಇತ್ತು. ಆದದರಿಂದ ಮಕ್ಕಳಿರಾ, ನಿಮಗೆ ಅಪ್ಪನು ಎಂದಾದರು ಕತ್ತು ಇತ್ತರೆ ರಾಮನಂತೆ ಮಾಡದೆ ಮಿತವಾಗಿ ತಿನ್ನಿರಿ.

೨೩. ಲ ಲಾ ಲಿ ಲು ಲೆ ಲ್ಲ ಲ್ಲಾ ಲ್ಲಿ 23.

ಲಡ್ಡು | ಎಲ್ಲಾ | ಇಲ್ಲಿ | ಅಲ್ಲಿ | ಅಲ್ಲಾಡು | ಲದ್ದಿ | ನಲಿ | ಕಲ್ಲು | ಲಾಡಿ

ಅಮ್ಮಾ, ನನಗೆ ತಿನ್ನಲಿಕ್ಕೆ ಆ ಲಡ್ಡು ಇತ್ತು ತಾ.
ನಾನು ಗಾಳವನ್ನು ತರುವಾಗ ಅವನು ಕಲ್ಲು ಆಡುತ್ತಿದ್ದನು.
ನಾವು ಅವಮಾನ ತರುವ ಮಾತನ್ನು ಆಡಲು ಆಗದು.
ವನದಲ್ಲಿ ಇರುವ ಎಲ್ಲಾ ಮರಗಳು ಗಾಳಿಗೆ ಅಲ್ಲಾಡುತ್ತವೆ.
ಕಕ್ಕನು ನನಗೆ ಆರು ಮಾರು ಲಾಡಿ ನಿನ್ನೆ ತಂದು ಇತ್ತನು.
ನಾವು ಅಲ್ಲಿ ಇಲ್ಲಿ ತಿರುಗುತ್ತಾ ಇರಲು ಆಗದು.

ತಮ್ಮಾ, ವನದಲ್ಲಿರುವ ನಮ್ಮ ಕುದುರೆ ತಾ. ಅದಕ್ಕೆ ಕುಡೀಲಿಕ್ಕೆ ನೀರು ಇತ್ತು ತಿನ್ನಲಿಕ್ಕೆ ಗರುಕೆ ಇಡು. ನಾತವು ಆಗದಂತೆ ಅದರ ಅಡಿಗೆ ಇದ್ದ ಲದ್ದಿ ತೆಗೆ. ಅದನ್ನು ತಿಕ್ಕು. ಇದೆಲ್ಲಾ ಮಾಡಿ, ಮಿಂದು ತುರತವಾಗಿ ರಾಮನನ್ನು ಕರದು ತಾ. ಮತ್ತೆ ನಾವು ಅಮ್ಮ ಇತ್ತದ್ದನ್ನು ಉಂಡು ಆಡುವ, ನಡೆ.

೨೪. ಒ ಬ ಬ್ಬ 24.

ಒಬ್ಬ | ಒಂದು | ಒಮ್ಮೆ | ಒದೆ | ಬಲ | ಬಳಲಿ | ಬಂದು | ಬರ | ಬದುಕ

ದೇವರು ಒಬ್ಬನಾಗಿರುತ್ತಾನೆ. ಆತನು ನಮ್ಮನ್ನು ಬದುಕ ಮಾಡುತ್ತಾನೆ.
ಆತನು ತನ್ನ ಮಾತಿನ ಬಲದಿಂದ ಎಲ್ಲಾವನ್ನು ಮಾಡಿದನು.
ಆದದರಿಂದ ನಾವು ಅವನನ್ನು ವಂದನೆ ಮಾಡ ಬೇಕು.

ಒಂದು ಬಲವಾದ ಕುದುರೆ ಒಮ್ಮೆ ಕಕ್ಕನನ್ನು ಕಾಲಿನಿಂದ ಒದೆದು ಕೆಡವಿತು. ಅದರಿಂದ ಅವನು ತನ್ನ ಕಾಲು ಮುರಿದು ಬಳಲಿ ಮನೆಗೆ ಬಂದು ಮಲಗಿದ್ದನು. ಆಗ ನನ್ನ ತಮ್ಮನು ಪಂಡಿತನಿಂದ ಮದ್ದು ತಂದು ಅವನಿಗೆ ಇತ್ತನು. ಕಕ್ಕನು ಅದನ್ನು ತನ್ನ ಕಾಲಿಗೆ ಇಡಲು ಬರ ಬರ ಅದರಿಂದ ಅವನ ಕಾಲು ಮಾದು ಇತ್ತು. ಕಡೆಗೆ ಅವನು ನನ್ನ ತಮ್ಮನು ಮದ್ದು ತಂದು ಇತ್ತ ಉಪಕಾರಕ್ಕೆ ಅವನಿಗೆ ಇನಾಮು ಇತ್ತನು.

೨೫. ಕೊ ಗೊ ತೊ ವೊ ಲೊ ವ್ರೊ 25.

ಕೊಳ್ಳು	ಕೊಂಡು	ಕೊರಡು	ಕೊಡದೆ	ದೊರೆ	ವೊಡನೆ	ಒಬ್ಬೊಬ್ಬ
ತೊದಲು	ಗೊತ್ತು	ದೊಡ್ಡ	ದೊರಕು	ಅದಂ	ಕೊಡು	ಕೊಡಲಿ

ಅವನು ತೊದಲು ಮಾತು ಆಡುವದರಿಂದ ಗೊತ್ತಾಗುವದು ಇಲ್ಲಾ.
ಈ ಅಂಗಡಿಗಾರನಲ್ಲಿ ದೊಡ್ಡ ಅರುವೆಗಳು ದೊರಕಲಾರವು.
ಆ ದೊರೆ ನಮಗೆ ನಾಳೆ ಇನಾಮು ಕೊಡುತ್ತಾನೆ.

ಒಬ್ಬಾನೊಬ್ಬ ಕುರುಬರವನಿಗೆ ಒಂದು ಕೊಡಲಿ ದೊರಕಿತು. ಅವನು ಅದನ್ನು ತೆಗದು ಕೊಂಡು ಅಡವಿಗೆ ಬಂದು ಒಂದು ಮರದ ಗೆಲ್ಲಿನ ತುದಿಗೆ ಕುಳಿತು ಕೊಂಡು ಕೊರಡಿನ ಕಡೆಗೆ ತುಂಡು ಮಾಡುತ್ತಾ ಇರಲು ಒಬ್ಬ ದಾರಿಗನು ಕಂಡು—ಅಪ್ಪಾ, ಅಲ್ಲಿ ಕಡಿದರೆ ನಿನ್ನನ್ನು ನೀನೇ ಕೆಡವಿ ಕೊಳ್ಳುವಿ ಅನ್ನಲು ಅವನು—ನಡೆ, ನಡೆ, ಎಲ್ಲಾ ಬಲ್ಲೆ, ಅಂದನು. ಕಡೆಗೆ ಆ ಗೆಲ್ಲು ತುಂಡಾಗಿ ಅದರವೊಡನೆ ಕೆಳಗೆ ಬಿದ್ದನು. ಆದದರಿಂದ ಪರರ ಉತ್ತಮವಾದ ಮಾತಿಗೆ ಕಿವಿ ಕೊಡದೆ ಇದ್ದರೆ ಆ ಕುರುಬನ ಗತಿ ಬರುವದು.

೨೬. ತಿ ತೆ ತೊ ಎ ಒ 26.
ತೀ ತೇ ತೋ ಏ ಓ

ಎನು	ಒದು	ಬೇಕು	ನೋವು	ವೇಳೆ	ಅಲ್ಲವೊ
ಎಳು	ತೀರ	ನೇರಳೇ	ದೇವ	ತೇಲು	ತೋರು

ಬೆಳಗಾತ ಎಳುತ್ತ ದೇವರ ನೆನದು ಬರ ಬೇಕು.
ನಾವು ಆಡದೆ ಎನಾದರು ಒದುತ್ತಾ ಇರ ಬೇಕು.
ನಾನು ದಿನಾಲು ಮಡಿ ಆಗಿ ಇರ ಬೇಕು.

ಒಂದು ನದೀ ತೀರದಲ್ಲಿ ಒಂದು ನೇರಳೇ ಮರವು ಮತ್ತು ದೇವನಾಳವು ಇದ್ದವು. ಒಂದು ದಿನ ಬಲವಾದ ಗಾಳಿ ಬಂದಾಗ ಆ ಮರವು ಮುರಿದು ನದೀಲಿ ತೇಲುತ್ತಾ ಇರುವಲ್ಲಿ ದೇವನಾಳವನ್ನು ಕಂಡು, ಅಪ್ಪಾ! ನೀನು ಗಾಳಿಗೆ ಎದುರಾಗಿ ನಿಂತರು, ನಿನಗೆ ನೋವು ಬರಲಿಲ್ಲಾ ಅನ್ನಲು, ನಾನು ಗಾಳಿ ಬರುವಾಗ ಅದಕ್ಕೆ ನಡುಗಿ ಕೊಂಡು ವಂದನೆ ಮಾಡುವೆನು ಆದದರಿಂದ ಬದುಕಿದೆನು ಅಂದಿತು. ಆದ್ದದರಿಂದ ಬಲವಂತರು ತಮ್ಮ ಬಲಕ್ಕೆ ಗರ್ವ ಮಾಡಿದರೆ, ಒಂದು ವೇಳೆ ಅವರಿಗೆ ಕೇಡು ಬರುವದು ಎಂದು ತೋರುತ್ತದೆ ಅಲ್ಲವೋ?

೨೭. ಹ ಹಾ ಹಿ ಹೆ ಹೊ 27.

ಹುತ್ತ|ಹಂದಿ|ಹಾವು|ಹತ್ತರ|ಹೇಳು|ಹೊಕ್ಕು|ಹೀಗೆ|ಹೊರಗೆ|ಹೋಗು

ದೇವರ ಹೇಳಿಕೆಗೆ ಒಳಗಾದರೆ ಅವನು ಕಾಪಾಡುವನು.
ಹಾವು ಹುತ್ತದಲ್ಲಿ ಹೊಕ್ಕಲಿ ಎಂಬ ಹೇಳಿಕೆ ನಂಬ ತಕ್ಕದ್ದು.
ಪರರ ಒಡವೆಗಳನ್ನು ಕದ್ದರೆ ಪಾಪ ಹೊರಗೆ ಬರುವದು.

ಒಂದು ಮುಳ್ಳು ಹಂದಿ ಒಂದು ಹಾವಿನ ಹತ್ತರ—ನನಗೆ ಈ ದಿನ ಇರುವದಕ್ಕೆ ಎಡೆ ಇತ್ತರೆ ಆಗುತಿತ್ತು—ಅಂದಾಗ ಹಾವು—ಒಳ್ಳೇದು, ಇಲ್ಲಿ ಇರು ಅಪ್ಪಾ—ಎಂದು ಹೇಳಲು ಆ ಮುಳ್ಳು ಹಂದಿ ಅದರ ಹುತ್ತದಲ್ಲಿ ಹೊಕ್ಕಿತು. ಹೀಗೆ ಇರುತ್ತಾ ಇರುವಲ್ಲಿ ಆ ಹಾವಿನ ಮೆದುವಾದ ಒಡಲಿಗೆ ಅದರ ಮುಳ್ಳು ತಗಲಲಿಕ್ಕೆ ಇದು ಅದನ್ನು ಕರದು ಅಪ್ಪಾ! ಇನ್ನಾದರು ನೀನು ಹೋಗು ಎಂದು ಹೇಳಲು ಆ ಹಂದಿ ನಾನು ಹೋಗಲಿಕ್ಕೆ ಇಲ್ಲಾ, ನೀನು ಹೋಗು ಎಂದು ಆ ಹಾವನ್ನು ಹೊರಗೆ ಹಾಕಿತು. ಆದದರಿಂದ ಪಾಪ! ದುರುಳರಿಗೆ ಮಾಡಿದ ಉಪಕಾರವು ಅಪಕಾರ ತರುವದು.

೨೮. ಟ ಟಾ ಟು ಟೆ ಂಟ ಂಟು ಟ್ಟ ಟ್ಟು 28.

ಹಟ	ಕಟ್ಟಳೆ	ಲೊಟ್ಟೆ	ಕೆಟ್ಟು	ತಟ್ಟು	ಉಂಟು	ಕುಟ್ಟು
ಆಟ	ಗುಟ್ಟು	ತುಂಟ	ಕಟ್ಟು	ತಂಟೆ	ದಿಟ	ಕಂಟಕ

ಹಟಗಾರರು ತಮ್ಮ ಹಟದಿಂದಲೇ ಕೆಟ್ಟು ಹೋಗುತ್ತಾರೆ.
ಮಕ್ಕಳಿರಾ ನೀವು ಹಟ ಮಾಡಲು, ಲೊಟ್ಟೆ ಆಡಲು ಆಗದು.
ನಮ್ಮನ್ನು ಉಂಟು ಮಾಡಿದವನ ಕಟ್ಟಳೆ ಮೀರದೆ ನಡ ಕೊಳ್ಳುವ.
ತುಂಟರ ತಳ್ಳಿಗೆ ಹೋದರೆ ಕಂಟಕ ತಪ್ಪದೆ ತಟ್ಟುವದು.

ಒಂದು ದಿನ ಕುರುಬರ ಹುಡುಗನು ಕುರಿ ಹಿಂಡು ಕಾದು ಇರಲು ಆಟಕ್ಕಾಗಿ ಹುಲಿ ಬಂತು! ಹುಲಿ ಬಂತು! ಎಂತಾ ಗುಲ್ಲು ಗುಟ್ಟಲಾಗಿ ಹತ್ತರ ಇದ್ದ ಒಕ್ಕಲಿಗರು ಉಪಕಾರಕ್ಕಾಗಿ ಬಂದರು. ಆಗ ಆ ಹುಡುಗನು ತುಂಟನಂತೆ ನೆಗಾಡಿ ಕಾಲು ತಟ್ಟಲು—ಒಕ್ಕಲಿಗರು ಇವನು ತಂಟೆಗಾರನು ಇವನ ಮಾತು ನಂಬಲು ಆಗದು ಎಂದು ಹೇಳಿ ಹೋದರು. ಆ ಬಳಿಕ ಒಂದು ದಿನ ದಿಟವಾಗಿ ಹುಲಿ ಬರಲು ಹುಡುಗನು ಎದೆ ಕುಟ್ಟಿ ಗುಲ್ಲು ಮಾಡಿದಾಗ ಒಕ್ಕಲಿಗರು ಬರಲಿಲ್ಲಾ. ಆ ಕಾಲದಲ್ಲಿ ಅವನ ಕುರಿಗಳನ್ನು ಎಲ್ಲಾ ತಿಂದಿತು. ಆದದರಿಂದ ಮಕ್ಕಳಿರಾ! ನೀವು ಆ ಹುಡುಗನಂತೆ ಆಟಕ್ಕೆ ಆದರು ದಿಟ ಅಲ್ಲದ ಮಾತು ಹೇಳಲಾಗದು.

೨೯. ಬಾ ಬಿ ಬು ಬೆ ಬೊ ಂಬ 29.

ಬಾರದು	ಬೀಳ	ಬೋನು	ಬೊಟ್ಟು	ಬೊಗರಿ	ಬೇಗನೆ	ಬೀದಿ
ಬಹುದು	ಬೆಳೆ	ಬೇಡ	ಬಿಟ್ಟು	ಬಿದ್ದಿತು	ಬಂದನು	ಬಿದುರು

ಮಾತು ಮಾತಿಗೆ ದೇವರ ನಾಮ ಹೇಳ ಬಾರದು.
ಕೆಟ್ಟ ಹುಡುಗರೊಡನೆ ಗಂಟು ಬೀಳ ಬಾರದು.
ಹೆಡ್ಡನಾಗಿ ಬೆಳದರೆ ಮುದುಕನಾದಾಗ ಅನ್ನ ದೊರಕದು.

ಒಬ್ಬ ಹುಡುಗನು ಬೀದಿಗೆ ಹೋಗಿ ಬೊಗರಿ ಆಡುವಾಗ ಒಬ್ಬನು ಒಂದು ಬೋನಿನಲ್ಲಿ ಕೊಂಡು ಹೋಗುವ ಕಪ್ಪು ಬೊಟ್ಟುಳ್ಳ ಹಕ್ಕಿ ನೋಡಿ—ಎಲಾ ಮುದುಕನೇ ಆ ಹಕ್ಕಿ ನನಗೆ ಕೊಡ ಬಹುದೇ—ಅನ್ನಲು ಅವನು ಕೊಟ್ಟು ಬಿಟ್ಟು ಹೀಗಂದನು—ಅಪ್ಪಾ! ಹಾದೀಲಿ ಬೇಗನೇ ಹೋಗ ಬೇಡ, ಬೋನು ಕೆಳಗೆ ಬಿದ್ದು ಒಡದರೆ ಅದು ನಿನಗೆ ದಕ್ಕದು. ಹುಡುಗನು—ಒಳ್ಳೇದು—ಎಂದು ಮೆಲ್ಲಗೆ ಬರುವಾಗ ಒಂದು ಮರದಲ್ಲಿ ಮತ್ತೊಂದು ಹಕ್ಕಿ ಇರಲು ಅದನ್ನೇ ನೋಡುತ್ತಾ ಬಂದನು. ಆಗ ಕಾಲಿಗೆ ಒಂದು ಬಿದುರು ತಾಗಿ ಬಿದ್ದನು. ಬೋನು ಬಿದ್ದು ಒಡೆದು ಹೋಗಿ ಅದರಲ್ಲಿ ಇದ್ದ ಹಕ್ಕಿ ಬೇಗನೆ ಹಾರಿ ಬಿಡಲು ಹುಡುಗನು ಅಳುತ್ತಾ ಮನೆಗೆ ಬಂದನು.

೩೦. ಯ ಯಾ ಯಿ ಯೊ ಯೆ ಯ್ಯ 30.

ಮರ್ಯಾದೆ	ಮರೆಯು	ಮದ್ಯ	ಕಯ್ಯಾ	ಯಾವಾಗ	ಅತ್ಯುತ್ತಮ
ಹಿರಿಯರು	ಯಾವದು	ವಿದ್ಯ	ಇಳಿಯ	ಆಯಿತು	ಹಾರ್ಯಾಡು

ದೊಡ್ಡವರ ಹತ್ತರ ಮರ್ಯಾದೆಯಿಂದ ಇರುವದು ಉತ್ತಮ.
ಹಿರಿಯರು ಹೇಳಿದ ಒಳ್ಳೇ ಮಾತುಗಳನ್ನು ಮರೆಯಲಾಗದು.
ಪರರಿಗಿರುವ ಯಾವದೊಂದನ್ನಾದರು ಅಪಹಾರ ಮಾಡ ಬೇಡ.
ಮದ್ಯ ಪಾನ ಮಾಡುವವರು ಯಾವಾಗಲು ಬಡವರಾಗಿರುವರು.
ಎಲ್ಲಾ ರತ್ನಕ್ಕಿಂತ ವಿದ್ಯಾರತ್ನವು ಅತ್ಯುತ್ತಮವಾದದ್ದು.
ಒಳ್ಳೆ ಮಾತುಗಳನ್ನು ಹಿರಿಯರ ಕೈಯ್ಯಾ ಕೇಳಿ ತಿಳಿಯ ಬೇಕು.

ಒಂದು ದಿನ ಒಂದು ನವಿಲು ಬೆಳ್ಳಕ್ಕಿಗೆ ನಗೆ ಗೇಡು ಮಾಡ ಬೇಕೆಂದು ತನ್ನ ಹಿಂಗರಿಗಳನ್ನು ಎತ್ತಿ ಅದರ ಹೊಳವನ್ನು ತೋರ ಮಾಡಲು, ಬೆಳ್ಳಕ್ಕಿ ಅದರ ಗರ್ವ ಇಳಿಯ ಮಾಡ ಬೇಕೆಂದು—ಎಲಾ ಈ ಮಹಿಮೆ ದಿಟವಾದರೆ ನಿನ್ನ ಕುಲ ದೊಡ್ಡದೇ; ಆದರೆ ನನಗೆ ಬಾನಿನಲ್ಲಿ ಹಾರ್ಯಾಡುವ ಬಲವಿದ್ದರೆ ಅತ್ಯುತ್ತಮವೆ—ಅಂದಿತು.

ಇದರಿಂದ ಪರರ ಮಾನ ಕೇಡು ತನ್ನ ಮಾನ ಕೇಡು ಅಂದ ಹಾಗೆ ಆಯಿತು.

೩೧. ಕೂ ಗೂ ಬೂ ಮೂ ರೂ ತೂ. ಊ 31.

ಊಹನೆ	ಕೂಗು	ಮೂರು	ದೂಟ್ಯಾಡು	ಮೂಡು	ದೂರ	ಊನ
ಕೂದಲು	ಗೂಡು	ಬೂರುಗ	ಮೂಗು	ಮೂಗುತಿ	ಊರು	ಲೂಟಿ
ರೂಪ	ತೂತು	ದೂತ	ದೂರು	ನೂತನ	ನೂರು	ನೂಲು

ನಿನ್ನ ತಲೆಯ ಕೂದಲು ಬಹಳ ಉದ್ದವಾಗಿ ಇರುತ್ತದೆ.
ನೀನು ಹಕ್ಕಿಯ ಗೂಡುಗಳನ್ನು ತೆಗದು ಮರಿಗಳನ್ನು ಕೊಲ್ಲ ಬಾರದು.
ಬೂರುಗದ ಮರದ ಹತ್ತಿ ಬಹಳ ಉಪಯೋಗಕ್ಕೆ ಬರುತ್ತದೆ.
ನನ್ನ ಅಕ್ಕನ ಮೂಗಿನಲ್ಲಿ ನಿನ್ನೆ ತಂದ ಮೂಗುತಿ ಉಂಟು.
ಈ ಊರಲ್ಲಿ ಮೂರುವರೆ ರುಪಾಯಿಗೆ ಒಂದು ಮುಡಿ ಅಕ್ಕಿ ದೊರಕುತ್ತದೆ.
ಇದರ ರೂಪವು ಅದರ ರೂಪವು ಒಂದೇ ತರವಾಗಿರುತ್ತದೆ.
ಆ ತೂತಿನಲ್ಲಿ ಎರಡು ಇಲಿ ಮರಿಗಳು ಇವೆ, ನೋಡು.
ದೂತನು ನಮ್ಮನ್ನು ದೂರುತ್ತಾನೆ. ಅವನಿಂದ ನಾವು ದೂರವಾಗ ಬೇಕು.
ಅದು ನೂತನವಾದ ನೂಲು. ನನಗೆ ನೂರು ಮಾರು ತೆಗದುಕೋ.
ಲೂಟಿ ಮಾಡುವ ಹುಡುಗರು ಎಂದೂ ಒಳ್ಳೆಯವರಾಗುವದಿಲ್ಲಾ.
ಬೇಕಾದ ಉತ್ತರ ತಿಳಿಯದಿದ್ದರೆ ಊಹನೆ ಮಾಡಿ ಹೇಳ ಬೇಡ.
ಹೊತ್ತು ಮೂಡುವ ದಿಕ್ಕಿಗೆ ಮೂಡಲು ಎಂದು ಹೇಳುತ್ತಾರೆ.
ದೂರು ಹೇಳುತ್ತಾ ಬರುವವರಿಗೆ, ಕಡೆಯಲ್ಲಿ ಗೆಳೆಯರು ಉಳಿಯಲಿಕ್ಕಿಲ್ಲ.

ಒಂದು ಎತ್ತು ತನ್ನ ಒಡೆಯನ ಮನೆಯಿಂದ ಹೊರಟು ಹೋಗಿ ಆ ಊರಿಗೆ ಕೂಗಳತೆ ದೂರದಲ್ಲಿ ಇರುವ ಒಂದು ವನದಲ್ಲಿ ನಿಂತಿತು. ಬಳಿಕ ಆ ಬೂಮಿಯ ಅಲ್ಲಿ ಬೆಳದ ಎಳೇ ಹುಲ್ಲು ತಿಂದು ತಿಳೀ ನೀರು ಕುಡಿದು ಮಹಾ ರೂಪವಾಗಿ ಬೆಳೆಯಿತು. ಹೀಗಿರುವಲ್ಲಿ ಒಂದಾನೊಂದು ದಿನ ದಿನದಂತೆ ತೀನಿ ತಿಂದು ಹೊಟ್ಟೆ ತುಂಬಿ ಆನಂದ ಪಟ್ಟು ಬಹು ದೂರ ಪರ್ಯಂತ ತಿರುಗುತ್ತಾ ಇರುವಾಗ ತನ್ನ ಬಲದ ಗರ್ವದಿಂದ ಹೆದರದೆ ದೂಟ್ಯಾಡುತ್ತಿರಲು, ಒಂದು ಗುಳಿಯಲ್ಲಿ ಬಿದ್ದು ಕಾಲು ಮುರಿದು ಕೊಂಡಿತು. ಆಗ ಅದು, ನನಗೆ ಯಾರೂ ಇದಿರು ಇಲ್ಲವೆಂತ ನೆನದದರಿಂದಲ್ಲವೇ ದೇವರು ನನಗೆ ಊನ ಬರುವ ಹಾಗೆ ದಂಡನೆ ಮಾಡಿದ್ದು ಎಂದು ಹೇಳಿ ಹೇರಾಳವಾಗಿ ಅತ್ತಿತು. ಆದದರಿಂದ ಮಕ್ಕಳಿರಾ ನೀವು ಆ ಎತ್ತಿನ ಹಾಗೆ ಗರ್ವ ಪಟ್ಟು ನಡದರೆ ಅದೇ ಗತಿ ನಿಮಗೂ ತಪ್ಪದೆ ಬರುವದು. ಆದದರಿಂದ ಉತ್ತಮನಾದ ದೇವರಿಗೆ ಒಳಗಾಗಿ ನಡದು ಆತನ ದಯ ಪಡ ಕೊಳ್ಳಿರಿ.

೩೨. ಸ ಸಾ ಸಿ ಸು ಸೂ ಸೆ ಸೊ ಸ್ಸ 32.

ಸಮಸ್ತ	ಸಕಲ	ಸ್ತುತಿಸು	ಪುಸ್ತಕ	ಸಡಿಲು	ಸಂತೆ	ಸವಿ	ಸೇವಕ
ಸೋರು	ಸಲಿಕೆ	ಸಾಲು	ಸಿಡುಬು	ಸಿಡಿಲು	ಸೂಸು	ಸೀಳು	ಸುರಳಿ
ವಸ್ತು	ಕೆಲಸ	ಸೀಸ	ಹೆಸರು	ಮತ್ಸರ	ವ್ಯಸನ	ಸೂರ್ಯ	ಮನಸ್ಸು

ಸಮಸ್ತರೂ ಸಕಲ ಲೋಕವನ್ನು ಉಂಟು ಮಾಡಿದವನ ಸ್ತುತಿಸ ಬೇಕು.
ಆ ಪುಸ್ತಕದ ಕಟ್ಟು ಸಡಿಲಾಗಿ ಕಾಗದಗಳು ಬೀಳುತ್ತವೆ.
ನಾನು ನಿನ್ನೆ ಸಂತೆಗೆ ಹೋಗಿ ಸವಿ ಲಡ್ಡು ಕೊಂಡು ಕೊಂಡೆನು.
ಸಲಿಗೆ ಕೊಟ್ಟ ನಾಯಿ ಕಾಲು ಕಡಿಯಿತು ಎಂಬದು ಒಳ್ಳೇ ಗಾದೆ.
ಸೇವಕರನ್ನು ಬಹಳವಾಗಿ ಪೀಡಿಸುವದು ಉತ್ತಮವಲ್ಲಾ.
ಸಾಲ ಮಾಡುವವರ ಬದುಕು ಸೋರುವ ಮನೆಯ ಹಾಗೆ.
ಹುಡುಗನೇ ಸಲಿಕೆಗಳನ್ನೆಲ್ಲಾ ಸಾಲು ಸಾಲಾಗಿ ಇಡು.
ದಾಕು ಹಾಕಿದರೆ ಸಿಡುಬು ರೋಗ ಆಗುವದಿಲ್ಲಾ.
ನಿನ್ನೆ ಸಿಡಿಲು ಗಾಳಿ ಮಳೆ ಬಹಳವಾಗಿ ಸೂಸಿತು.
ಆ ಬಾಳೇ ಎಲೆಯ ಸೀಳು ನನಗೆ ತೆಗದು ಕೊಡು.
ಆ ಕಾಗದಗಳನ್ನು ಸಮನಾಗಿ ಸುರಳಿ ಮಾಡಿ ಕಳುಹಿಸು.
ಸುಳ್ಳು ಹೇಳುವದೂ ಪರರ ವಸ್ತು ಸುಲಿಯುವದೂ ಪಾಪವಾಗಿದೆ.
ಸೀಸ ಬಹಳ ತೂಕವಾಗಿದೆ. ಬೆಂಕಿಯಲ್ಲಿ ಬೇಗ ಕರಗಿಸ ಬಹುದು.
ಸೂರ್ಯನು ಅಸ್ತಮಿಸುವ ದಿಕ್ಕಿಗೆ ಪಡುವಲು ಎಂದು ಹೆಸರುಂಟು.
ಮನಸ್ಸಿನಲ್ಲಿ ಮತ್ಸರವೂ ಕೆಟ್ಟ ವ್ಯಸನವೂ ಇರ ಕೂಡದು.

ಒಂದಾನೊಂದು ದಿನ ಎರಡು ಇಲಿಗಳು ತಾವು ವಾಸಿಸುತ್ತಿದ್ದ ಮಾಡಿನಿಂದ ಸರಸರನೆ ಇಳಿದು ಬಂದು ಒಂದು ಸಮ ನೆಲದಲ್ಲಿ ಕುಳಿತು ಕೊಂಡು ಮಾತನಾಡುತ್ತಾ ಇರುವಾಗ ಒಂದು ಮದ ಬಂದ ಆನೆಯು ಮಾವಟಿಗನಿಂದ ತಪ್ಪಿಸಿ ಕೊಂಡು ಬೇಗನೆ ಅವುಗಳ ಸಮೀಪ ಬರಲು ಅವು ಅದನ್ನು ಕಂಡು ಹೆದರಿ ಅಲ್ಲಿ ಇದ್ದ ಒಂದು ಸುರಂಗದ ಹತ್ತರ ಹೋಗಿ ಅದರಲ್ಲಿ ನುಸುಳಿದವು. ಆಗ ಅದರಲ್ಲಿ ಬಹು ಕಾಲದಿಂದ ನೆಲಸಿ ಇದ್ದ ಒಂದು ಮುದಿ ಹಾವು ಇವುಗಳನ್ನು ಕಂಡು ನಲವಿನಿಂದ ಹಿಡಿದು ತಿಂದಿತು. ಆದದರಿಂದ ಯಾರಾದರೂ ಹೆದರಿಕೆ ಪಟ್ಟವರು ಒಂದು ಕಡೆಯಲ್ಲಿ ಬೇಗನೇ ಹೊಕ್ಕೊಳ್ಳುವ ಮೊದಲು ಅಲ್ಲಿ ಏನಾದರೂ ಹಾನಿ ಬರುವದೋ ಎಂತಾ ಮನಸ್ಸಿನಲ್ಲಿ ನೆನಸಿಕೊಂಡ ವಿನಹ ಆ ಕೆಲಸದಲ್ಲಿ ಮುಂದರಿಯುವದು ಸಮನಲ್ಲಾ.

೩೩. ಧ ಢ ಫ ಭ ದ್ಧ ಡ್ಢ ಷ್ಪ ಬ್ಭ 33.

ಭುಕ್ತಿ	ಭೂಮಿ	ಗೂಢ	ಧಿಟ	ವಿರೋಧ	ಆರಾಧಿಸು	ಫಿರಗಿ
ಫಲ	ಭಿನ್ನ	ಭಯ	ಭಕ್ತಿ	ಧನ	ಧಿಕ್ಕರಿಸು	ಭೂತ
ಭೇದಾ	ಧೊರೆ	ಢೇರೆ	ಧನುಸ್ಸು	ವೇಧನೆ	ಧಾರಾಳ	ಫಟಿಂಗ

ತಾಯಿ ತಂದೆಗಳ ಮಾತಿಗೆ ವಿರೋಧವಾಗಿ ಆಡ ಬಾರದು.
ಭಿನ್ನವಾದ ಗಡಿಗೆ ಹೊನ್ನಿತ್ತರೆ ಸಮವಾದೀತೇ?
ಭಯ ಭಕ್ತಿ ಇಲ್ಲದ ಹುಡುಗರನ್ನು ಯಾರೂ ಒಲಿಯರು.
ಫಲಕ್ಕೆ ತಕ್ಕ ಬಿತ್ತು; ನೆಲಕ್ಕೆ ತಕ್ಕ ನೀರು.
ಧನವಂತರು ಬಡವರನ್ನು ಧಿಕ್ಕರಿಸುವದು ಸಮವಲ್ಲಾ.
ಭೇದಾ ತಿಳಿಯದಿದ್ದರೂ ವಾದಾ ಬಿಡುವದಿಲ್ಲಾ. ಹಾಗೆ ಬಾರದು.
ಧೊರೆಯವರು ಅಲ್ಲಿ ತಮ್ಮ ಢೇರೆ ಹೊಡದು ಇರುತ್ತಾರೆ.
ಫಟಿಂಗರ ಸಹವಾಸ ಮಾಡುವದು ಯಾರಿಗೂ ಸಲ್ಲದು.
ಭೂತಗಳನ್ನು ಅರಾಧಿಸುವದು ದೇವ ಭಕ್ತಿಗೆ ವಿರೋಧವೇ.
ಪಾಪದ ಫಲವು ಮನೋವೇಧನೆಯೇ; ಆ ವೇಧನೆ ಈಗ ತಿಳಿಯದು.
ಧೊರೆಗಳಿಗೆ ಲಡಾಯಿಯಲ್ಲಿ ಫಿರಂಗಿ ಬಹಳ ಬೇಕಾಗುತ್ತದೆ.

ಒಂದಾನೊಂದು ಸಮಯದಲ್ಲಿ ಭುಕ್ತಿಫಲನೆಂಬ ಒಬ್ಬ ವಿದ್ವಾಂಸನು ತನ್ನ ಮಕ್ಕಳ ಸಂಗಡ ಆಡುತ್ತಿರಲಾಗಿ ಮತ್ತೊಬ್ಬ ವಿದ್ವಾಂಸನು ಅದನ್ನು ಕಂಡು ಅವನನ್ನು ಹಾಸ್ಯ ಮಾಡುತ್ತಿರುವಲ್ಲಿ ಭುಕ್ತಿಫಲನು ಅವನ ಅಹಂಕಾರ ಇಳಿಸ ಬೇಕೆಂದು ಅವನ ಮುಂದೆ ಬಂದು ಒಂದು ಧನುಸ್ಸು ತರಿಸಿ ಅದರ ಹೆದೆಯನ್ನು ಇಳಿಸಿ ನೆಟ್ಟಗೆ ಮಾಡಿ ಭೂಮಿಯ ಮೇಲೆ ಇಟ್ಟು,—ಈ ಗುಟ್ಟು ಹೇಳಿದರೆ ನೀನು ವಿದ್ವಾಂಸನೇ ಸರಿ ಎನ್ನಲು ಆ ಪಂಡಿತನು ಆ ಗುಟ್ಟು ಒಡೆಯಲೊಲ್ಲದೆ—ಸ್ವಾಮಿ, ಭುಕ್ತಿಫಲರೇ ಅದರ ಗೂಢ ನನಗೆ ಧಿಟವಾಗಿ ತಿಳಿಯದು ನೀವೇ ಹೇಳ ಬೇಕು—ಅನ್ನಲು; ಭುಕ್ತಿಫಲನು—ಒಳ್ಳೇದು ಹೇಳುತ್ತೇನೆ ಕೇಳು ಈ ಧನುಸ್ಸು ಯಾವಾಗಲೂ ಬಾಗಿ ಕೊಂಡಿದ್ದರೆ ಬೇಗನೇ ಮುರಿದು ಹೋದೀತು ಕೆಲಸ ಬಿದ್ದ ವೇಳ್ಯಕ್ಕೆ ತತ್ಸಮಯದಲ್ಲಿ ಬೊಗ್ಗಿಸಿ ಕೆಲಸವಿಲ್ಲದ ವೇಳ್ಯಕ್ಕೆ ಬಿಟ್ಟರೆ ಧನುಸ್ಸು ಬಹಳ ದಿವಸ ಉಳದೀತು. ಮತ್ತು ಧಾರಾಳ ಕೆಲಸ ಮಾಡೀತು ತಿಳಕೋ—ಎಂದು ಹೇಳಿದನು. ಆದ್ದದರಿಂದ ಹುಡುಗರನ್ನ ತಕ್ಕ ಸಮಯದಲ್ಲಿ ಆಟಕ್ಕೆ ಬಿಡುವದು ತಪ್ಪಲ್ಲ ಯೋಗ್ಯವೇ.

೩೪. ್ರ ಕ್ರ ತ್ರ ಪ್ರ ವ್ರ ಸ್ರ 34.

ತೀವ್ರ	ಗ್ರಾಮ	ದರಿದ್ರ	ಭದ್ರ	ಸ್ತೋತ್ರ	ಪಾತ್ರ	ನಮ್ರ
ವ್ರಯ	ವಕ್ರ	ಪ್ರಾಯ	ಧಾತ್ರಿ	ಸುಗ್ರೀವ	ಪ್ರೀತಿ	ಕ್ರಮ

ಹುಡುಗರು ತೀವ್ರವಾಗಿಯೂ ಒಳ್ಳೆದಾಗಿಯೂ ಬರೆಯ ಕಲಿಯ ಬೇಕು.

ಗ್ರಾಮ ಗ್ರಾಮಗಳಲ್ಲಿ ಸಾಲೆ ಇದ್ದರೆ ಹುಡುಗರಿಗೆ ಬಹಳ ಉತ್ತಮ.

ಕೆಲಸ ಮಾಡದೆ ಮನಸ್ಸು ಬಂದ ಹಾಗೆ ತಿರುಗುವವರು ದರಿದ್ರರಾಗುತ್ತಾರೆ.

ನಿನ್ನ ಸಾಮಾನುಗಳನ್ನೆಲ್ಲಾ ಕಳೆಯದಂತೆ ಭದ್ರವಾಗಿ ಇಟ್ಟುಕೊ.

ಎಲ್ಲಾ ಸ್ತೋತ್ರಕ್ಕೆ ಪಾತ್ರನಾದ ದೇವರನ್ನು ಎಂದಿಗೂ ಮರತಿರಬಾರದು.

ನಮ್ಮನ್ನು ಕಾಪಾಡು ಎಂತಾ ನಾವು ದೇವರನ್ನು ನಮ್ರವಾಗಿ ಬೇಡಿಕೊಳ್ಳ ಬೇಕು.

ವ್ರಯ ಮಾಡುವದರಲ್ಲಿ ಸಕಲರೂ ಮಿತವಾಗಿರ ತಕ್ಕದ್ದು.

ನೀನು ಹಾಕಿದ ಗೆರೆಗಳೆಲ್ಲಾ ಬಹಳ ವಕ್ರವಾಗಿ ತೋರುತ್ತವೆ. ಅದು ತಪ್ಪು.

ವಿದ್ಯವಿಲ್ಲದವರ ಹಾಗೆ ಗ್ರಾಮ್ಯ ಮಾತಾಡುವದು ಹಾಸ್ಯಕರವಾದದ್ದು.

ಒಂದಾನೊಂದು ಊರಲ್ಲಿ ಧಾತ್ರಿಯೆಂಬ ಒಬ್ಬ ಹೆಂಗಸು ಉಂಟು. ಅವಳಿಗೆ ಸುಗ್ರೀವನೆಂಬ ಮಗನು. ಅವನು ಬಾಲ್ಯ ಕಳದು ಹತ್ತು ಸಂವತ್ಸರ ಪ್ರಾಯದವನಾದಾಗ, ಒಂದು ದಿನ ಅವನ ಅಮ್ಮನು ಕೆಲವು ಸಾಮಾನುಗಳನ್ನು ತರುವದಕ್ಕಾಗಿ ಅವನನ್ನು ಪೇಟೆಗೆ ಕಳುಹಿಸಿದಳು. ಆ ಹುಡುಗನು ತೀವ್ರವಾಗಿ ಅಂಗಡಿಗೆ ಹೋಗಿ, ತಾಯಿ ಹೇಳಿದ ಹಾಗೆ ಪ್ರತ್ಯೇಕ ಪ್ರತ್ಯೇಕವಾಗಿ ಸಾಮಾನುಗಳನ್ನು ಕೊಂಡುಕೊಂಡು, ಅಂಗಡಿಯವನಿಗೆ ತೋರದ ಹಾಗೆ ಒಂದು ಹಿತ್ತಾಳಿ ಬಟ್ಲು ಕದ್ದುಕೊಂಡು ಬಂದನು. ಬಳಿಕ ಅವನು ಮನೆಗೆ ಬಂದು ಅವುಗಳನ್ನೆಲ್ಲಾ ತನ್ನ ತಾಯಿಗೆ ಕೊಟ್ಟಾಗ, ಅವಳು ಆ ಕಳ್ಳತನಕ್ಕೆ ಅವನನ್ನು ದಂಡಿಸದೆ ಅಧಿಕ ಪ್ರೀತಿ ಮಾಡಿ ತಿನ್ನುವದಕ್ಕೆ ಕೊಟ್ಟಳು. ಅದಕ್ಕೆ ಅವನು ಆನಂದ ಪಟ್ಟು ಅಂದಿನಿಂದ ಅಲ್ಪ ಕಳವುಗಳನ್ನು ಮಾಡ ತೊಡಗಿ, ಕಡೆಯಲ್ಲಿ ದೊಡ್ಡ ಕಳ್ಳನಾದನು. ಒಂದು ದಿನ ದೇವಾನುಗ್ರಹದಿಂದ ಅವನ ಕಳ್ಳತನ ಗೊತ್ತಾಗಿ ಕೊರಡೆ ಹೊಡೆಯಲ್ಪಟ್ಟನು. ಆ ಪೆಟ್ಟಿನ ವೇಧನೆಯಿಂದ ಆ ಹುಡುಗನಿಗೆ ಎದೆ ರೋಗ ಉಂಟಾಗಿ, ಅವನು ಕೆಲವು ದಿವಸಕ್ಕೆ ಸತ್ತು ಹೋದನು. ಆದದ್ದರಿಂದ ತಾಯಿ ತಂದೆಗಳು ತಮ್ಮ ಮಕ್ಕಳ ಕೆಟ್ಟ ಬುದ್ಧಿ ನಿಲ್ಲಿಸದೆ ಇದ್ದರೆ ಕಾಲಕ್ರಮದಲ್ಲಿ ಅವರಿಗೆ ಬಹಳ ವ್ಯಸನವು ಉಂಟಾಗುವದು.

೩೫. ಣ ಣಾ ಣಿ ಣೀ ಣೆ ಣೊ 35.

ನಾಣೇವಾರು | ಗಣನೆ | ಕೋಣ | ಗೇಣಿ | ಮಾಣು | ಕರುಣ | ಗೇಣು | ಆಣೆ
ಹಣ | ರುಣ | ಎಣಿಸು | ಗುಣ | ಕಂಣು | ಪ್ರಾಣ | ಗೋಣ | ಅಣ್ಣ | ಮಣಿ

ಕೋಣ ಬೆಳದರೆ ಆನೆ ಆದೀತೇ? ಗೇಣುದ್ದ ತಪ್ಪಿದರೆ ಮಾರುದ್ದ ತಪ್ಪುವದು.

ಗೇಣಿ ಬಾಕಿ ಮಾಡಿ ಕೊಂಡರೆ ಹೊಲದ ಒಡೆಯನು ಬಿಡನು.

ಗುಣಾಕಾರವೆಂಬದು ಒಂದು ತರದ ಸಂಕಲಿತವಾಗಿರುತ್ತದೆ.

ನೀನು ನನಗೆ ಕೊಟ್ಟ ಬಟ್ಟೇ ತುಂಡು ಒಂದು ಗೇಣೂ ಇಲ್ಲ.

ಹುಡುಗರೇ, ಮಾತು ಮಾತಿಗೆ ಆಣೆ ಇಡುವದು ಉತ್ತಮವಲ್ಲ.

ಅಲ್ಲಿರುವ ದೋನಾಣೆ, ನೀಮಾಣೆ, ಪಾವಾಣೆಗಳನ್ನೆಲ್ಲಾ ನಾಣೇವಾರು ಮಾಡು.

ಹಣದಿಂದ ರುಣ ಆಗುವದು; ಗುಣದಿಂದ ಪರಲೋಕ ಆಗುವದು.

ಪರವಸ್ತುವಾದ ಒಂದು ಅಣುವಾದರೂ ಅಪಹರಿಸ ಬೇಡ.

ರಹಸ್ಯದಲ್ಯಾದರೂ ಕೆಟ್ಟ ಕೆಲಸ ಮಾಡ ಬಾರದು; ದೇವರ ಕಣ್ಣು ಅಂಧಕಾರದಲ್ಲೂ ನಮ್ಮನ್ನು ನೋಡುತ್ತದೆ; ಆದದರಿಂದ ಎಲ್ಲಾ ಹೀನ ಕೆಲಸಗಳನ್ನು ಮಾಣು.

ಒಂದು ಮುಂಗಲಿಯು ದಿನಂಪ್ರತಿ ಒಬ್ಬ ವ್ಯಾಪಾರಿಯ ಮನೆಗೆ ಬಂದು ಇಟ್ಟಿದ್ದ ರೊಟ್ಟಿ ಮಾಂಸ ಮೊದಲಾದವುಗಳನ್ನು ಕದ್ದು ತಿಂದು ಆ ವ್ಯಾಪಾರಿಗೆ ಉಪದ್ರ ಮಾಡುತ್ತಿರಲು, ಅವನು ಅದನ್ನು ಹಿಡತಂದು ಅದರ ಗೋಣು ಮುರಿಯ ಬೇಕೆಂತ ಎಣಿಸುವ ಸಮಯದಲ್ಲಿ, ಆ ಮುಂಗಲಿಯು ಕರುಣ ಹುಟ್ಟುವಂತೆ ದೀನತೆಯಿಂದ—ಎಲೋ ಅಂಣನೇ ನೀನು ನನ್ನ ಪ್ರಾಣಹಾನಿ ಮಾಡ ಬೇಡ; ನಾನಾದರೆ ನಿನ್ನ ಮನೆಯಲ್ಲಿ ಬಹಳವಾಗಿ ತೊಂದರೆ ಕೊಡುವ ಇಲಿಗಳನ್ನು ಕೊಲ್ಲುವದಲ್ಲದೆ ಆ ಇಲಿಗಳ ನಿಮಿತ್ತವಾಗಿ ಮಾಡಿಗೆ ಬಂದು ಹುಡುಗರನ್ನೂ ಮಕ್ಕಳನ್ನೂ ಬಹಳವಾಗಿ ಹೆದರಿಸುವ ಹಾವುಗಳನ್ನು ಹತ ಮಾಡುತ್ತಿದ್ದೆನು. ಗುಣ ನಿಧಿಯೇ! ಇವುಗಳ ವಿನಹಾ ಇನ್ನು ಮುಂದೆ ಗಣನೆ ಇಲ್ಲದ ಉಪಕಾರ ಮಾಡ್ಯೇನು; ಪ್ರಾಣ ದಾನ ಕೊಡು—ಎಂದು ಮಣಿದು ಬೇಡಿ ಕೊಳ್ಳಲು, ಅವನು—ಸುಮ್ಮನೆ ಇರು! ಗುಣ ಗುಟ್ಟ ಬೇಡ; ನಿನ್ನ ಉಪಕಾರವೆಲ್ಲಾ ಸಾಕು, ಬಲ್ಲೆ ಬಲ್ಲೆ—ಎಂದು ಅದನ್ನು ಹತ ಮಾಡಿದನು. ಆದದರಿಂದ ತನ್ನ ಗುಣಕ್ಕೆ ಮಾಡಿದ ಕೆಲಸವನ್ನು ಪರರ ಗುಣಕ್ಕೆ ಮಾಡಿರುತ್ತೇನೆ ಅಂದರೆ ಯಾರೂ ಒಪ್ಪಲಾರರು.

೩೬. ಶ ಶಾ ಶಿ ಶು ಶೆ ಶೊ 36.

ಶಾಯಿ	ಶೀಳು	ಶಾನೆ	ಶಕ್ಕರೆ	ಶಂಕು	ಶಿಪ್ಪೆ	ಶಿಶು	ನಾಶ
ಶರೆ	ಶೆಕೆ	ಶಿಕ್ಕು	ಸುಶೀಲ	ಶಾಲೆ	ಶೇರು	ಶರೀರ	ಶೀಲತನ

ನನ್ನ ಶಾಯಿ ಬುರುಡೆ ಶೀಳು ಕಲ್ಲಿಗೆ ಬಿದ್ದು ಒಡೆಯಿತು.
ಶೆಕೆ ಕಾಲದಲ್ಲಿ ಗಾಳಿಯು ಬಹಳ ಹಿತಕರವಾಗಿರುತ್ತದೆ.
ಮೋಸಗಾರರ ಮಾತು ಶಕ್ಕರೆಯಂತೆ ಇದ್ದರೂ ನಂಬಲಾಗದು.
ಹೊಳೆ ಬದಿಗಳಲ್ಲಿ ಶಂಕು ಹುಳಗಳ ಶಿಪ್ಪೆ ಬಿದ್ದಿರುತ್ತವೆ.
ಕಳ್ಳತನ ಮಾಡುವವರಿಗೆ ಶರೆ ಮನೇ ಅನ್ನ ಶಿಕ್ಕುವದು.
ಶಬ್ದ ಮಾಡಿ ಆಗಲಿ ಗಂಟ್ಲಿನೊಳಗೆ ಆಗಲಿ ಓದದೆ ಸಮ ಸ್ವರದಿಂದ ಓದು.
ಹುಡುಗರು ವಿದ್ಯವನ್ನು ಕಲಿತು ಸುಶೀಲವಂತರಾಗಿರ ಬೇಕು.
ತಪ್ಪದೆ ಶಾಲೆಗೆ ಹೋಗುವವನು ವಿದ್ವಾಂಸನಾಗುತ್ತಾನೆ.
ಈ ಊರಲ್ಲಿ ಶಾನೆ ಮಂದಿ ವಿದ್ಯಕ್ಕೆ ಮನಸು ಕೊಡದೆ ಕೆಡುತ್ತಾರೆ.
ಕಲ್ಲು ಶಕ್ಕರೆ ಮದ್ದು ಮಾಡಲಿಕ್ಕೆ ಬಹಳ ಉಪಯೋಗವಾಗಿರುತ್ತದೆ.
ಹಾಳು ವ್ಯಸನಗಳಲ್ಲಿ ಶಿಕ್ಕಿಬಿದ್ದವರು ಎಂದೂ ಒಳ್ಳೆದಾಗುವದಿಲ್ಲ.
ಈ ಶರೀರವು ಸಾಯುತ್ತದೆ, ಆದರೆ ಆತ್ಮವು ಎಂದೂ ಸಾಯದು.

ಒಂದು ದನ ತನ್ನ ಶಿಶುವಾದ ಎಳೆಗರುವನ್ನು ಬಿಟ್ಟು, ಹಟ್ಟಿಗೆ ಬಾಗಲು ಎಳದು, ಹುಲ್ಲುಗಾವಲಲ್ಲಿ ಶಾನೇ ಹುಲ್ಲು ತಿನ್ನುತ್ತಾ ಇತ್ತು. ಆಗ ಒಂದು ಹುಲಿ ಮೆಲ್ಲಗೆ ಹಟ್ಟಿ ಬದಿಗೆ ಶೇರಿ ದನವಿನಂತೆ ಧ್ವನಿ ಮಾಡಿ—ಶಿಶುವೇ ಶಿಶುವೇ! ಬಾಗಲ ತೆರೆ—ಅಂದಿತು. ಆ ಎಳೆಗರು ಒಂದು ಕಂಡಿ ಬಳಿಗೆ ಸಾರಿ ಬಂದು ಅದರ ಶರೀರವನ್ನು ನೋಡಿ—ಕಳ್ಳನೇ, ನಾನು ಬಾಗಲ ತೆರೆಯುವದಿಲ್ಲಾ; ನೀನು ನಿನ್ನ ಹಾದಿ ಹಿಡಿದು ಹೋಗು—ಎಂದು ಹೇಳಿ ನಾಶ ಪಡದೆ ಇತ್ತು. ಆದದರಿಂದ ಹುಡುಗರಿರಾ, ಟಕ್ಕರ ಮಾತಿನಲ್ಲಿ ಶಾನೆ ಬರವಸ ಇಡದೆ, ಆ ಎಳೆಗರುವಿನ ಹಾಗೆ ನಡ ಕೊಳ್ಳಿರಿ.

(ಬಾಯಿಪಾಠ.)

ಬಾಲಕರೆ ಹಾದಿಯೊಳು ನಿಲ್ಲದಾಡದಲೇ,
ಶಾಲೆಯೊಳು ಶೇರುವದು ಹೊತ್ತು ಮಾಡದಲೇ, ॥ ೧ ॥
ಶೀಲತನದಿಂ ಬರದು ಓದಿ ಸುಗುಣದಲೀ,
ಬಾಲತನವೆಂಬುವದ ಹಾಕಿ ವಿದ್ಯದಲೀ. ॥ ೨ ॥

೩೭. ಷ ಷಾ ಷಿ ಷೂ ಷೆ ಷೊ ಕ್ಷ 37.

ಇಷ್ಟ	ವಿಶಿಷ್ಟ	ಸಂತೋಷ	ಅಷ್ಟು	ಎಷ್ಟು	ಕಷ್ಟ	ಪರಿಕ್ಷೆ
ಕ್ಷೇಮ	ಮನುಷ್ಯ	ನಿಮಿಷ	ವಿಷ	ಅಷ್ಟ	ದುಷ್ಟ	ಭಿಕ್ಷೆ
ಕ್ಷಣ	ವಿಷಯ	ವರುಷ	ತುಷ್ಟಿ	ನಷ್ಟ	ಭಾಷೆ	ಶಿಕ್ಷೆ

ಎಲ್ಲಾ ದ್ರವ್ಯಗಳಲ್ಲಿ ಉತ್ತಮವಾದ ದ್ರವ್ಯ ವಿದ್ಯವೇ ಸರಿ.
ಎಷ್ಟು ನಾಡಿ ಹೊಡಿಯುತ್ತದೋ ಅಷ್ಟು ಸಾರಿ ದೇವರನ್ನು ಸ್ಮರಿಸು.
ವಿದ್ಯೆ ವಿಶೇಷವಾಗಿ ಕಲಿತವನಿಗೆ ಪರಿಕ್ಷೆ ಕೊಡುವದು ಕಷ್ಟವಲ್ಲಾ.
ಬುದ್ಧಿಯಿಲ್ಲದ ಮನುಷ್ಯನು ಕೇವಲ ಪಶುವಾಗಿದ್ದಾನೆ.
ಆ ವಿಶಿಷ್ಟ ಸಾಮಾನುಗಳು ನೀರು ಬಿದ್ದು ನಷ್ಟವಾದವು. ಕಷ್ಟ!
ದುಷ್ಟರಾದವರು ಪಾಪಕ್ಕೆ ಪರಿಹಾಸ್ಯ ಮಾಡುತ್ತಾರೆ.
ದೇವರ ಕಟ್ಟಳೆ ನಡಿಸುತ್ತಾ ಬಂದರೆ ಮನಸಿಗೆ ತುಷ್ಟಿ ಆಗುವದು.
ಬೋಧಕರ ಅಪ್ಪಣೆ ಮೀರಿದರೆ ನನಗೆ ಶಿಕ್ಷೆ ಶಿಕ್ಕುವದು.
ಮೂಡು, ಪಡು, ಬಡಗು, ತೆಂಕು; ತೆಮ್ಮೂಡಲು, ತೆಂಪಡುವಲು, ಬಡಗುಪಡುವಲು, ಬಡಗುಮೂಡಲು—ಇವು ಅಷ್ಟ ದಿಕ್ಕುಗಳು.
ದುಷ್ಟ ಕೆಲಸದಿಂದ ಆಗುವ ಸಂತೋಷವೂ ಹುಲ್ಲಿನಿಂದ ಆಗುವ ಬೆಂಕಿಯೂ ಒಂದು ನಿಮಿಷ ಮಾತ್ರ ಇರುವದು.

ವಿಶಾಲ ನಗರದಲ್ಲಿ ಒಬ್ಬ ಬ್ರಾಹ್ಮಣ ಇದ್ದನು. ಅವನು ವಿಶಿಷ್ಟ ಶಾಸ್ತ್ರಗಳನ್ನು ಕಲಿತು ಇರುವನು. ಅವನ ಮಗನು ಹದಿನಾರು ವರುಷ ಪ್ರಾಯದವನಾಗುವಷ್ಟರಲ್ಲಿ ಎಲ್ಲಾ ಭಾಷೆಗಳನ್ನು ಕಲಿತು ನಿಪುಣನಾದನು. ಒಂದಾನೊಂದು ದಿನ ಅವನ ತಂದೆಯು ಸಂತೋಷದಿಂದ ಮಗನನ್ನು ಕರದು ಮಗನೇ ಹೊಳೇ ದಾಟಿ ಹೋಗಿ ಅತ್ತಕಡೇ ಊರಲ್ಲಿ ನಿನಗೆ ಇಷ್ಟವಾದ ಮನೆಗಳಿಗೆ ಹೋಗಿ ಭಿಕ್ಷಾಟನ ಮಾಡಿ ಕೊಂಡು ಬಾ ಎಂದು ಕಳುಹಲು ಹುಡುಗನು ಸಂತೋಷದಿಂದ ಹೋಗಿ ನದೀ ದಾಟುವಾಗ ಮಳೇ ಕಾಲವಾದ್ದರಿಂದ ಮಳೇ ನೀರೆಲ್ಲಾ ಒಂದೇ ಸಾರಿ ಉಕ್ಕುತ್ತಾ ಬರಲು, ಅಷ್ಟು ಇಷ್ಟು ಎನ್ನದೆ ಭಯ ಪಟ್ಟು—ದೇವರೇ, ಭಕ್ತರಿಗೆ ಕ್ಷೇಮ ಕೊಡುವವನೇ ನನ್ನನ್ನು ಈ ಕಷ್ಟದಿಂದ ಬಿಡಿಸು—ಎಂದು ದೇವರನ್ನು ಬೇಡಿ ಕೊಳ್ಳುತ್ತಿರಲು ಆ ಕ್ಷಣವೇ ಒಂದು ಮರದ ಹಲಿಗೆ ತೇಲಿ ಕೊಂಡು ಅವನ ಸಮೀಪ ಬರಲು ಅದನ್ನು ಹಿಡಿದು ಪಾರಾದನು. ಆದ್ದರಿಂದ ಮಕ್ಕಳೇ ನೀವು ಸಹಾ ಕಷ್ಟ ಕಾಲದಲ್ಲಿ ನಷ್ಟ ಪಡದ ಹಾಗೆ ದೇವರನ್ನು ಧ್ಯಾನಿಸಿಕೊಂಡು ಆತನ ಸಹಾಯ ಪಡ ಕೊಳ್ಳಿರಿ!

೩೮. ರ್ ರ್ಷ ರ್ಮ ರ್ಗ ರ್ಧ ರ್ಪ ರ್ಯ 38.

ವರ್ಷ	ದುರ್ಮಾರ್ಗ	ಕಾರ್ತೀಕ	ವರ್ಧನೆ	ಅರ್ಧ	ದುರ್ಗ
ಕಾರ್ಯ	ವಿಸ್ತೀರ್ಣ	ದುರ್ಲಭ	ದುಷ್ಕರ್ಮ	ಸ್ವರ್ಗ	ವರ್ತಿಸ
ತರ್ಕ	ದುರ್ಬುದ್ಧಿ	ನಿರ್ಮಲ	ಗರ್ವಿಷ್ಟ	ವರ್ಣ	ದರ್ಭೆ

ವರ್ಷ ವರ್ಷಕ್ಕೆ ವಿದ್ಯಾಭ್ಯಾಸದಲ್ಲಿ ವರ್ಧನೆ ಮಾಡ ಬೇಕು.
ಕಾರ್ತೀಕ ತಿಂಗಳಲ್ಲಿ ವರ್ಷ ಬಹಳವಾಗಿ ಸುರಿಯುವದು.
ಹುಡುಗರು ದುರ್ಮಾರ್ಗವನ್ನು ಬಿಟ್ಟು ಸನ್ಮಾರ್ಗದಲ್ಲಿ ವರ್ತಿಸ ಬೇಕು.
ದೇವರನ್ನು ಸದಾ ಧ್ಯಾನ ಮಾಡುವವರು ಸ್ವರ್ಗಕ್ಕೆ ಹೋಗುವರು.
ಆ ವಿಸ್ತೀರ್ಣವಾದ ತೋಟದಲ್ಲಿ ನಾನಾ ವರ್ಣದ ಹೂವುಗಳವೆ.
ಆ ಬಡವನಿಗೆ ಅರ್ಧ ರೂಪಾಯಿ ಆದರೂ ಕೊಟ್ಟು ಬಿಡು.
ನಿಮ್ಮ ಶರೀರವನ್ನೂ ಬಟ್ಟೆಗಳನ್ನೂ ನಿರ್ಮಲವಾಗಿಟ್ಟರೆ ರೋಗವಿಲ್ಲಾ.
ಆ ಕಾರ್ಯವು ಸಫಲವಾಗುವದು ಬಹಳ ದುರ್ಲಭ.
ಆ ವಿದ್ವಾಂಸರು ತಮ್ಮೊಳಗೆ ತರ್ಕವಾಡುತ್ತಾ ಇದ್ದಾರೆ.
ದುಷ್ಕರ್ಮ ಮಾಡದೆ ಸತ್ಕರ್ಮ ಮಾಡಿದರೆ, ಮೋಕ್ಷ ಉಂಟಾಗುವದು.

ಹೊಸದುರ್ಗವೆಂಬ ಊರಲ್ಲಿ ಸುಬುದ್ಧಿ ದುರ್ಬುದ್ಧಿ ಎಂಬ ಇಬ್ಬರು ಹುಡುಗರು ಇದ್ದರು. ಅವರಲ್ಲಿ ಸುಬುದ್ಧಿಯು ತನ್ನ ಶರೀರವನ್ನು ನಿರ್ಮಲವಾಗಿ ಇಟ್ಟು ಕೊಂಡು ಕರ್ತನನ್ನು ದ್ಯಾನಿಸುತ್ತಾ ಸನ್ಮಾರ್ಗದಲ್ಲಿ ನಡೆಯುತ್ತಾ ಇದ್ದನು. ದುರ್ಬುದ್ಧಿಯು ಗರ್ವಿಷ್ಟನಾಗಿ ನಿರ್ಬಲರನ್ನು ಪೀಡಿಸುತ್ತಾ ದುಷ್ಟ ಕರ್ಮಗಳನ್ನು ಮಾಡುತ್ತಾ ಕೆಟ್ಟವನಾಗಿದ್ದನು. ಒಂದಾನೊಂದು ದಿವಸ ಇವರಿಬ್ಬರಿಗೂ ಗಂಟು ಬಿದ್ದಾಗ ದುರ್ಬುದ್ಧಿಯು ಸುಬುದ್ಧಿಯನ್ನು ಕಂಡು—ಸ್ನೇಹಿತನೇ ಆ ದೊಡ್ಡ ತೋಟಕ್ಕೆ ಹೋಗಿ ಸಂಗಡ ಆಡುವಾ—ಎಂದು ಹೇಳಿ ಕರ ಕೊಂಡು ಹೋದನು. ಬಳಿಕ ಅವರಿಬ್ಬರು ಅಲ್ಲಿ ಆಡುತ್ತಾ ಇರುವಾಗ್ಯೆ ದುರ್ಬುದ್ಧಿಯು ಅಲ್ಲಿರುವ ಹೂವಿನ ಗಿಡಗಳನ್ನೆಲ್ಲಾ ಕಿತ್ತು ಹಾಕಿ ತಂಟೆ ಮಾಡುತ್ತಿರಲು ತೋಟಗಾರನು ಬಂದು ಇವರನ್ನು ಕಂಡು ಶಾನೆ ಶಿಟ್ಟು ಮಾಡಿ ಹತ್ತರ ಇದ್ದ ದರ್ಭೇ ಹುಲ್ಲು ತೆಗದು ಕೊಂಡು,—ದುರ್ಮಾರ್ಗಿಗಳಿಗೆ ಶಿಕ್ಷೆ ಇದೆ—ಎಂತಾ ಬಹಳ ಹೊಡದು ತೋಟದ ಹೊರಗೆ ಹಾಕಿದನು. ಆದದರಿಂದ, ಹುಡುಗರಿರಾ, ನೀವು ದುರ್ಮಾರ್ಗರ ಸಹವಾಸ ಮಾಡಿದರೆ ಅವರೊಡನೆ ಕಾರ್ಯವಿಲ್ಲದೆ ಶಿಕ್ಷೆ ಪಡ ಕೊಳ್ಳುವ ದುರ್ಗತಿ ಬಂದೀತು.

೩೯. ಚ ಜ ಚ್ಛ ಜ್ಜ 39.

ಚರಿತ್ರ	ಯಜಮಾನ	ಜಡ	ಜಲ್ಲೆ	ಚಕ್ಕಂದ	ನಿಜ
ಜಗಳ	ಚಲಾವಣಿ	ಜನ	ಜರೆ	ಜನಿಸು	ಚಮತ್ಕಾರ
ಕಚ್ಚದೆ	ಜಡಿಮಳೆ	ಜಂಭ	ಚಡಿ	ಜತನ	ಹಿತಾಲೋಚನೆ

ನಾನಾ ದೇಶಗಳ ಚರಿತ್ರ ಓದುವದರಿಂದ ಅನುಭವ ಉಂಟಾಗುತ್ತದೆ.
ಮಿತಿ ಮೀರಿ ತಿಂದರೆ ಜಡ ಉಂಟಾಗುತ್ತದೆ.
ಅನೇಕ ಜನರು ವಿಶೇಷವಾಗಿ ಜಂಭಕ್ಕೆ ಒಳಗಾಗಿದ್ಧಾರೆ.
ಬಹಳ ಕಡೆಗಳಲ್ಲಿ ಹಳೆ ದುಡ್ಡುಗಳು ಚಲಾವಣಿ ಆಗುವದಿಲ್ಲ.
ಒಳ್ಳೇಯವರು ಪರರ ಹತ್ತರ ಜಗಳವಾಡರು.
ಕಬ್ಬಿನ ಜಲ್ಲೆಯ ರಸ ತೆಗದು ಕಾಯಿಸಿದರೆ ರವೆ ಆಗುತ್ತದೆ.
ಆತ್ಮಕ್ಕೆ ಜರೆಯೂ ಮರಣವೂ ಇಲ್ಲ. ಶರೀರವು ಸತ್ತು ಮಣ್ಣಾಗುವದು.
ತೇಳಿಗೆ ಯಜಮಾನಿಕೆ ಕೊಟ್ಟರೆ ಮನೆ ಜನಕ್ಕೆಲ್ಲಾ ಕಚ್ಚದೆ ಇರದು.
ಚಕ್ಕಂದಗಾರರ ಮಾತಿನಲ್ಲಿ ನಂಬಿಕೆ ಇಡ ಬೇಡಾ.
ಅವನು ತಪ್ಪು ಮಾಡಿದ್ದರಿಂದ ಬೋಧಕನು ಅವನಿಗೆ ಹತ್ತು ಚಡಿ ಕೊಟ್ಟನು.
ಜನಿಸಿದಾಗಲೇ ಮರಣವೆಂಬದು ನಿಜವಾದ ಗಾದೆ.
ಜಡಿ ಮಳೆ ಕಾಲದಲ್ಲಿ ಬಹಳ ತಿರುಗದೆ ಜತನವಾಗಿರ ಬೇಕು.

1. ನೀನು ನಿನ್ನ ತಂದೆ ತಾಯಿಗಳಿಗೆ ಚನ್ನಾಗಿ ಮಾನ ಕೊಡು; ಅದರಿಂದ ನಿನಗೆ ಅವರ ಆಶೀರ್ವಾದವು ನಿಜವಾಗಿ ಉಂಟಾಗುವದು.

2. ತಾಯಿ, ತಂದೆ, ಗುರು, ಯಜಮಾನರು ಹೇಳಿದ ಕೆಲಸವನ್ನು ಆ ಕ್ಷಣವೇ ಚಮತ್ಕಾರವಾಗಿ ಮಾಡ ಬೇಕು. ಅವರಿಗೆ ಸುಳ್ಳು ನೆವನ ಹೇಳ ಬಾರದು.

3. ದುಷ್ಟರಾದ ಜಗಳಗಂಟ ಹುಡುಗರ ಸಂಗತಿಯನ್ನು ಹಿಡಿಯ ಬೇಡೆಂದು ತಾಯಿ ತಂದೆಗಳು ಹೇಳಿದರೆ, ಆ ಪ್ರಕಾರ ಕೇಳ ಬೇಕು. ಅದು ನಿನಗೆ ಬುದ್ಧಿಯ ಮಾತಾಗಿರುತ್ತದೆ.

4. ವಿದ್ಯವನ್ನು ಕಲಿಸುವವನು, ಅನ್ನವನ್ನು ಕೊಡುವವನು, ಭಯದೊಳಗಿಂದ ರಕ್ಷಿಸುವವನು ಈ ಮೂರು ಜನರೂ ತನಗೆ ಹಿತಾಲೋಚನೆ ಮಾಡುವವರಾದ್ದರಿಂದ ಹೆತ್ತ ತಂದೆಯ ಸಮಾನವೆಂದು ತಿಳಿಯ ಬೇಕು.

5. ನೀನು ನಿನ್ನ ಹಿರಿಯರಿಗೆ ಮರ್ಯಾದೆ ಮಾಡಿದರೆ ಮುಂದೆ ನಿನಗೆ ಜನಿಸಿದ ಮಕ್ಕಳು ನಿನಗೆ ಮರ್ಯಾದೆ ಮಾಡುವರು.

೪೦. ಚಾ ಚಿ ಚೀ ಚು ಚೊ ಚೋ ಝ 40.
ಜಾ ಜಿ ಜೀ ಜು ಜೊ ಜೋ

ಸೂಜಿ	ಚೂರಿ	ಚಾಪೆ	ಮೇಜು	ಕುರ್ಚಿ	ಚಿಕ್ಕ	ಜೇನು
ಜಾಗ್ರತೆ	ಜ್ಞಾಪಕ	ಜ್ಞಾನಿ	ತ್ಯಜಿಸು	ಜುಗಾರು	ಚೋದ್ಯ	ಜೋಲು
ಚೇತನ	ಜ್ಯೋತಿ	ದುರಾಚಾರ	ಚಾವಡಿ	ಚಾಳಿ	ಚಿಂತೆ	ಚುರುಕು

ಚಂದ್ರಗೆ ಸ್ವಂತ ಪ್ರಕಾಶವಿಲ್ಲಾ, ಅದರ ಪ್ರಕಾಶ ಸೂರ್ಯನಿಂದ ಉಂಟಾಗುತ್ತದೆ.

ಉಕ್ಕು ಬಹಳ ಗಟ್ಟಿ. ಇದರಿಂದ ಸೂಜಿ ಚೂರಿ ಮುಂತಾದ್ದು ಮಾಡುತ್ತಾರೆ.
ಭೂಚಕ್ರದಲ್ಲಿ ಮೂರು ಪಾಲು ನೀರೂ ಒಂದು ಪಾಲು ನೆಲವೂ ಉಂಟು.
ಚಾಪೇ ಮಾಡುವ ಹುಲ್ಲು ಈ ದೇಶದಲ್ಲಿ ಬಹಳ ಬೆಳೆಯುತ್ತದೆ.
ಮೇಜು ಕುರ್ಚಿ ಮಾಡುವದಕ್ಕೆ ಬೀಟಿ ಮರವು ಚಲುವಾದದ್ದು.
ಬುದ್ಧಿವಂತನು ಜೇನು ಹುಳದಂತೆ ಜಾಗ್ರತೆಯಿಂದ ಕೆಲಸ ಮಾಡುವನು.
ಮರತು ಹೋದದ್ದನ್ನು ತಿರಿಗಿ ಓದಿ ಜ್ಞಾಪಕ ಮಾಡಿ ಕೊಳ್ಳ ಬೇಕು.
ಜ್ಞಾನಿ ಬಂದರೆ ಮನ್ನಿಸು ಅಜ್ಞಾನಿ ಬಂದರೆ ತ್ಯಜಿಸು ಎಂಬದು ಒಳ್ಳೇ ಗಾದೆ.

ಉಜ್ಜಯನೀ ಪಟ್ಟದಲ್ಲಿ ವೀರರಾಜನೆಂಬ ಅರಸನು ಇದ್ದನು. ಅವನ ಮಗನು ಅಜ್ಞಾನನಾಗಿ ಜುಗಾರಾಡುತ್ತಾ, ಕಂಡವರನ್ನು ಜರದು ಹಾಸ್ಯ ಮಾಡುತ್ತಾ, ಜಗಳಾಡುತ್ತಾ, ದುರಾಚಾರದಿಂದಿದ್ದನು. ರಾಜನು ತನ್ನ ಮಗನ ಗುಣವನ್ನು ಕಂಡು ಜಡ ಮನಸ್ಸುಳ್ಳವನಾಗಿ ಒಂದು ದಿನ ಅವನನ್ನು ಕೋಣೇ ಚಾವಡಿಗೆ ಕರೆಯಲು ಹುಡುಗನು ಚೋದ್ಯ ಪಟ್ಟು ಬಂದಾಗ ಅವನನ್ನು ಹತ್ತರ ಇರಿಸಿ ಕೊಂಡು ನನ್ನ ಕುಲ ಚಂದ್ರನೇ ವಿದ್ವಾಂಸ ಜನರನ್ನು ಅಪಮಾನ ಪಡಿಸುವದರಿಂದ ನಿನಗೆ ನಿಜವಾಗಿ ದೋಷ ಬರುತ್ತದೆ. ಅದರಿಂದ ಅವರಿಗೆ ಹಾನಿ ಇಲ್ಲಾ ಹ್ಯಾಗಂದರೆ:—ಮಧ್ಯಾನ್ಹದಲ್ಲಿ ಪ್ರಕಾಶಿಸುವ ಸೂರ್ಯನಿಗೆ ಬಾಯಿ ತುಂಬಾ ನೀರು ಹಾಕಿ ಕೊಂಡು ಚಮತ್ಕಾರವಾಗಿ ಉಗುಳಿದರೆ ಆ ನೀರು ಅವನ ಮೋರೆಯಲ್ಲಿಯೇ ಬೀಳುವದು. ಸೂರ್ಯನಿಗೆ ದೋಷವಿಲ್ಲಾ ಎನ್ನಲು ಹುಡುಗನು ತಂದೆಯ ಚಿತ್ತಾನುಸಾರವಾಗಿ ಜ್ಞಾನದಿಂದ ನಡೆದು, ದುಷ್ಟರ ಜೋಲಿಗೆ ಹೋಗದೆ ಕರಿ ತೆಗದ ಜ್ಯೋತಿಯಂತೆ ಬುದ್ಧಿ ಪ್ರಕಾಶ ಉಳ್ಳವನಾಗಿ, ಮೊದಲಿನ ಚಾಳಿಗಳಿಗೆ ಚಿಂತೆ ಪಡುತ್ತಾ ತಂದೆಯ ಮಾತನ್ನು ಸದಾ ಜ್ಞಾಪಕ ಮಾಡುತ್ತಾ ಚುರುಕಾಗಿ ಹೊಸ ಚೇತನ ಪಡ ಕೊಂಡವನಾಗಿ ವರ್ತಿಸುತ್ತಾ ಇದ್ದನು.

೪೧. ಐ ೈ ತೈ ಚೈ ಪೈ ವೈ 41.

ಕೈ	ಮೈಲಿಗೆ	ಅಂಗೈ	ರೈತ	ಪೈರು	ಪೈಮಾಶಿ	ಗೈರ್ಹಾಜರ್	ವೈನ
ಮೈ	ಬೈದಾಡು	ಚೈತ್ರ	ಐಗಳು	ದೈವ	ಮೈದಾನು	ಬೈಲುಗಳು	ಬೈಕೆ
ಸೈ	ನೈರ್ರುತಿ	ಪೈಕಿ	ಜೈಮಿನಿ	ಧೈರ್ಯ	ದೈವೀಕ	ಬೈನಿ ಮರ	ವೈಲ

ನೀನು ನಿನ್ನ ಅರುವೆಯನ್ನು ಮೈಲಿಗೆಯಾಗಿ ಇರಗೊಡ ಬಾರದು.
ಹುಡುಗರು ಶಾಲೆಯಲ್ಯಾದರೂ ಒಬ್ಬರಿಗೊಬ್ಬರು ಬೈದಾಡ ಬಾರದು.
ಕೈಯ್ಯ ಒಳಗಣ ಭಾಗಕ್ಕೆ ಅಂಗೈಯೆಂದು ಜನರು ಹೇಳುತ್ತಾರೆ.
ಮೈಗಳ್ಳ ಜನಗಳು ಕಷ್ಟಕ್ಕೆ ಅಂಜಿ ಕಡೆಯಲ್ಲಿ ಹೆಚ್ಚು ಕಷ್ಟ ಪಡುತ್ತಾರೆ.
ಚೈತ್ರಮಾಸದಲ್ಲಿ ಸುಗ್ಗಿ ಮುಗಿಯಿತು; ಹೊಲ ಗದ್ದೆಗಳೆಲ್ಲಾ ಒಣಗಿತು.
ರೈತರು ಹೊಲಗಳನ್ನು ಪೈರು ಮಾಡದಿದ್ದರೆ ನಮಗೆ ತಿನ್ನಲಿಕ್ಕೆ ಅನ್ನವಿಲ್ಲ.
ಐಗಳು ಜೈಮಿನಿ ಭಾರತಗಳನ್ನೆಲ್ಲಾ ಹೇಳ್ಯಾನು. ಕನ್ನಡ ಭಾಷೆಯಲ್ಲಿ ಪ್ರವೀಣ.
ಕೈಗೆ ಐದು ಬೆರಳು; ಹೆಬ್ಬೆಟ್ಟು, ಮುಂಬೆಟ್ಟು, ನಡುಬೆಟ್ಟು, ಉಂಗುರದ ಬೆಟ್ಟು, ಕಿರಿಬೆಟ್ಟು.
ಐಗಳ ಅಪ್ಪಣೆ ಇಲ್ಲದೆ ಶಾಲೆಯಿಂದ ಗೈರ್ಹಾಜರ್ ಆಗ ಕೂಡದು.
ಪ್ರತಿ ರೈತರ ಮಕ್ಕಳು ಪೈಮಾಶಿ ಮಾಡಲಿಕ್ಕೆ ಕಲಿಯುವದು ಅವಶ್ಯವೇ.
ದೈವಾನುಗ್ರಹವಿದ್ದವರು ಸರ್ವದಾ ಧೈರ್ಯವುಳ್ಳವರಾಗಿರ ಬಹುದು.

ಒಬ್ಬ ದನ ಕಾಯುವವನ ದನವು ತಾನು ಮೇಯಿಸುತ್ತಿದ್ದ ಮೈದಾನಿನಲ್ಲಿ ಇಲ್ಲದೆ ಇರಲು, ಅನೇಕ ಬೈಲುಗಳನ್ನು ದಾಟಿ ಒಂದು ಅಡವಿಗೆ ಹೋಗುವಾಗ—ದೇವರೇ, ನನ್ನ ದನ ಕದ್ದ ಕಳ್ಳನನ್ನು ಗೊತ್ತು ಮಾಡಿ ಕೊಟ್ಟರೆ ನನ್ನ ಕುರಿಗಳ ಪೈಕಿ ಒಂದನ್ನು ನಿನಗೆ ಹರಿಕೆಯಾಗಿ ಕೊಡುತ್ತೇನೆ—ಎಂದು ಹೇಳಿ ಕೊಂಡು ಕೈ ಮುಗಿದು ನೈರ್ರುತಿ ದಿಕ್ಕಿಗೆ ಹೋಗಲು—ಅಲ್ಲಿಯೇ ಸುಮಾರು ಐದು ಮಾರು ದೂರದಲ್ಲಿ ಒಂದು ಹುಲಿ ತನ್ನ ದನವನ್ನು ಒಂದು ಬೈನಿ ಮರದ ಕೆಳಗೆ ತಿನ್ನುವದನ್ನು ಕಂಡು ಕೈ ಕಾಲು ನಡುಗಿ ಹೆದರಿ ಕೊಳ್ಳುತ್ತಾ ತನ್ನನ್ನು ತಾನು ಬೈದು ಕೊಂಡು,—ದೇವರೇ, ಮುಂದೇನು ವೈನ! ಅಕಟಾ! ನನ್ನ ಬೈಕೆ ತೀರಿಸಿದಿ ಸೈ; ಈಗ ನೀನು ನನ್ನನ್ನು ಈ ಹುಲಿ ಬಾಯಿಯಿಂದ ತಪ್ಪಿಸಿದರೆ, ಇನ್ನು ಐದು ಕುರಿ ಕೊಡುತ್ತೇನೆ—ಎಂದು ಹೇಳುವಷ್ಟರಲ್ಲಿ ದೈವೀಕವಾಗಿ ಆ ಹುಲಿ ಅದನ್ನು ತೆಗದು ಕೊಂಡು ಹೋಗಲು, ಅವನು ವೈಲದಿಂದ ಮನೆಗೆ ತಿರುಗಿ ಬಂದನು.

೪೨. ಋ ೃ ಕೃ ಧೃ ವೃ ಹೃ ಘು ಘೂ 42.

ಸೃಷ್ಟಿಸು	ಹೃದಯ	ದೃಷ್ಟಿ	ಕೃಪೆ	ಘಡಿಯಾರವು	ಮೇಘ	ವೃಕ್ಷ
ಕೃತ್ರಿಮ	ಘಳಿಸು	ಮೃಗ	ಘಾತ	ಘಡಘಡನೆ	ಸೃಷ್ಟಿ	ಘಾಳಿ

ದೇವರು ಎಲ್ಲಾನ್ನು ಸೃಷ್ಟಿಸಿದ್ದರಿಂದ ಆತ ಸೃಷ್ಟಿಕರ್ತೃ ಅನ್ನಿಸಿಕೊಳ್ಳುತ್ತಾನೆ.
ಕೃತ್ರಿಮ ಯೋಚನೆಗಳು ಹೃದಯದಲ್ಲಿ ಬಚ್ಚಿದ್ದರೂ, ದೇವರ ದೃಷ್ಟಿಗೆ ತಪ್ಪವು.
ನಾವು ಎಲ್ಲಾ ಮೃಗಗಳ ಮೇಲೆ ಕೃಪೆ ಉಳ್ಳವರಾಗಿ ಇರ ಬೇಕು.
ಘಡಿಯಾರವು ನಮಗೆ ತಕ್ಕವಾದ ಸಮಯ ತಿಳಿಸುತ್ತದೆ.

ಲೋಕವು, ಮೇಘಗಳು, ಮಳೆ ಬುಗ್ಗೆಗಳು, ನದಿಗಳು.

ದೇವರು ಸೃಷ್ಟಿಸಿದ ನಾನಾ ಲೋಕಗಳೊಳಗೆ ಈ ಭೂಮಿ ಒಂದು ಲೋಕವು. ಅದು ಒಂದು ಕಿತ್ತಳೆಯ ಹಂಣಿನಂತೆ ಗುಂಡಾದ ಆಕಾರ ಉಳ್ಳದ್ದು. ಇರುವೆಗಳು ಒಂದು ಚೀನೀ ಕಾಯಿ ಸುತ್ತ ತಿರುಗುವ ವಿಧವಾಗಿ ಹಡಗಗಳು ಭೂಮಿಯ ಸುತ್ತಲು ತಿರುಗುತ್ತವೆ. ಭೂಲೋಕವು ಒಂದು ಪಾಲು ನೆಲವಾಗಿಯೂ ಮೂರು ಪಾಲು ಸಮುದ್ರವಾಗಿಯೂ ಇಧೆ. ಸಮುದ್ರದಲ್ಲಿ ಮತ್ಸ್ಯಗಳೂ ಮೊದಲಾದ ಜಂತುಗಳು ಸಂಚರಿಸುತ್ತಾ ಇರುವವು. ನೆಲದ ಮೇಲೆ ಮೃಗಗಳೂ ಮನುಷ್ಯರೂ ವಾಸ ಮಾಡುವರು. ಗಿಡ ಬಳ್ಳಿ ಮೊದಲಾದವುಗಳು ಮೊಳೆಯುವವು. ಬೆಟ್ಟಗಳು ಗುಡ್ಡೆಗಳು ಏರ್ಪಡಿಸಿಯವೆ.

ಸಮುದ್ರದ ನೀರು ಹಬೆಯಾಗಿ ಏರುತ್ತದೆ. ಈ ಹಬೆ ಆಕಾಶದಲ್ಲಿ ಕೂಡಿ ಮೇಘಗಳಾಗುತ್ತವೆ. ಆ ಮೇಘಗಳಿಗೆ ತಂಪಾದ ಘಾಳಿ ತಾಗಿದರೆ ಆ ಮೇಘಗಳು ವರ್ಷರೂಪವಾಗಿ ಸುರಿಯುವವು. ಇದಕ್ಕೆ ಮಳೆ ಎಂದು ಹೇಳುತ್ತಾರೆ. ಒಂದು ಮೇಘ ಮತ್ತೊಂದು ಮೇಘಕ್ಕೆ ತಾಗುವದರಿಂದ ಅನೇಕ ಸರ್ತಿ ಗುಡುಗು ಮಿಂಚು ಆಗುವವು. ಗುಡುಗಿನ ಧ್ವನಿಯು ಘಡಘಡನೆ ಕೇಳ ಬರುತ್ತದೆ. ಮಿಂಚು ವೃಕ್ಷ ಮೊದಲಾದವುಗಳಿಗೆ ತಗಲಿ ಅವುಗಳನ್ನು ಹಾಳು ಮಾಡಿದರೆ ಅದಕ್ಕೆ ಶಿಡಿಲು ಎಂದು ಹೇಳುತ್ತಾರೆ.

ಮಳೆ ತಗ್ಗುಗಳಲ್ಲಿ ಸುರಿಯುವಾಗ್ಯೆ ಅದರಿಂದ ಆಗುವ ನೀರು ಭೂಮಿಯಲ್ಲಿ ಊರಿ ಅದರ ಕೆಳಗೆ ಬುಗ್ಗೆಗಳಾಗಿ ಇರುತ್ತದೆ. ನಾವು ಭಾವಿಗಳನ್ನು ಅಗಿದು ಶೇದುವ ನೀರು ಆ ನೀರೇ. ಮಳೆ ಎತ್ತರ ದೇಶಗಳಲ್ಲಿ ಸುರಿದರೆ ನೀರು ಕಣಿವೆಗಳಲ್ಲಿ ಕೂಡಿ ಬುಗ್ಗೆಗಳಾಗಿ ಉಕ್ಕಿ ಹಳ್ಳಗಳಾಗಿ ಹರಿದು ತಗ್ಗು ಶೀಮೆಗಳಲ್ಲಿ ಕೂಡಿ ಬಂದು ದೊಡ್ಡ ನದಿಗಳಾಗಿ ಸಮುದ್ರಕ್ಕೆ ತಿರಿಗಿ ಶೇರುತ್ತವೆ.

೪೩. ಖ ಖಾ ಖಿ ಖು ಖೇ ಖೈ ಖೊ 43.

ಖೊಬ್ಬರಿ | ಖಜ್ಜಿ | ಲೆಖ್ಖ | ಸಂಖ್ಯೆ | ಮೂರ್ಖ | ಸುಖ | ದುಖ್ಖ | ಖರ್ಜೂರ | ಮುಖ

ಖೊಬ್ಬರಿಯನ್ನು ಗಾಣದಲ್ಲಿ ಹಾಕಿ ತಿರುಗಿಸಿ ಎಣ್ಣೆ ತೆಗೆಯುತ್ತಾರೆ. ಖಜ್ಜಿಗೆ ಗಂಧಕ ಹಚ್ಚಿ ಕೊಂಡರೆ ಖಜ್ಜಿ ಬೇಗ ವಾಸಿ ಆಗುತ್ತದೆ. ಹತ್ತು ಅಂಕೆಗಳು ಮಾತ್ರ ಉಂಟು; ಸಂಖ್ಯೆಗಳೆಷ್ಟುಂಟೆಂದರೆ, ಲೆಖ್ಖವಿಲ್ಲ; ಹಾಗಾದರೆ, ಸಂಖ್ಯೆಗಳನ್ನೆಲ್ಲಾ ಆ ಹತ್ತೇ ಅಂಕೆಗಳಿಂದ ಹ್ಯಾಗೆ ಬರೆಯುವದು? ಹೇಳು!

ಮೃಗಗಳಿಂದಾಗುವ ಉಪಕಾರಗಳು.

ಅನೇಕ ಮೃಗಗಳು ಮನುಷ್ಯರಿಗೆ ಬಹಳ ಉಪಕಾರ ಉಳ್ಳದ್ದು. ಇವುಗಳಲ್ಲಿ ಮುಖ್ಯವಾಗಿ ಪ್ರಯೋಜನವುಳ್ಳದ್ದು ದನ. ಎತ್ತು ಕೋಣಗಳು ಭಂಡೀ ಎಳೆಯುತ್ತವೆ, ಹೊಲ ಉಳುತ್ತವೆ. ಪಶು ಹಾಲು ಕೊಡುತ್ತದೆ. ಇವುಗಳ ನಾಲ್ಕು ಕಾಲ ಖುರಗಳು ಎರಡು ಹೋಳಾಗಿ ಶೀಳಿ ಇವೆ. ಕುರಿಗಳಿಂದ ಗದ್ದೆಗೆ ಗೊಬ್ಬರವೂ ಆಡುಗಳಿಂದ ಹಾಲೂ ದೊರಕುತ್ತವೆ. ಈ ಎಲ್ಲಾ ಮೃಗಗಳು ಬೇಕಾದಷ್ಟು ಹುಲ್ಲು ತಿಂದ ಮೇಲೆ ಸುಮ್ಮನೆ ನಿಂತು ಕೊಂಡಾಗಲಿ ಮಲಗಿ ಕೊಂಡಾಗಲಿ ತಿಂದದ್ದನ್ನು ತಿರಿಗಿ ಬಾಯಿಗೆ ತಂದು ಜಗಿಯುತ್ತವೆ. ಇದಕ್ಕೆ ಮಲಕು ಹಾಕುವದೆಂದು ಹೇಳುತ್ತಾರೆ.

ಕುದುರೆಗಳು ಸವಾರಿಗೂ ಆನೆ ಒಂಟೆಗಳು ದೊಡ್ಡ ದೊಡ್ಡ ಭಾರವನ್ನೂ ಕತ್ತೆ ಸಣ್ಣ ಭಾರವನ್ನೂ ಹೊರಲಿಕ್ಕೂ ಪ್ರಯೋಜನವಾಗಿವೆ. ನಾಯಿ ಮನೆ ಕಾಯುತ್ತದೆ. ಬೆಕ್ಕು ಇಲಿ ಮುಂತಾದ ದುಷ್ಟ ಪ್ರಾಣಿಯನ್ನು ಹಿಡಿದು ತಿನ್ನುತ್ತದೆ. ಹುಂಜವು ಕೂಗಿ, ರಾತ್ರೇ ಕಾಲದ ಸಮಯ ತಿಳಿಸುತ್ತದೆ. ಹೇಟೆಯು ಮೊಟ್ಟೆಗಳನ್ನು ಇಡುತ್ತದೆ.

ಅನೇಕ ಮೃಗಗಳು ಸತ್ತ ಮೇಲೂ ಪ್ರಯೋಜನಕ್ಕೆ ಬರುತ್ತವೆ. ಅವುಗಳ ಚರ್ಮ ಕೆರಗಳನ್ನು ಹೊಲಿಯುವದಕ್ಕೂ ಜೀನು ಪುಸ್ತಕಾದಿಗಳನ್ನು ಕಟ್ಟುವದಕ್ಕೂ ಉಪಯೋಗವಾಗಿದೆ. ಆನೆ, ಎಮ್ಮೆ, ಎತ್ತು, ಇವು ಮೊದಲಾದವುಗಳ ಕೊಂಬುಗಳಿಂದಲೂ ಎಲುಬುಗಳಿಂದಲೂ ವಿಚಿತ್ರವಾದ ಅನೇಕ ವಸ್ತುಗಳಾಗುತ್ತವೆ. ಕುರಿಗಳ ಬಂಡ ಅಥವಾ ಉಣ್ಣೆಯಿಂದ ವಸ್ತ್ರ ಮಾಡುತ್ತಾರೆ.

ನಾವು ಮನೆಯಲ್ಲಿ ಸಾಕುವ ಮೃಗಗಳಿಗೆ ನಮಗೆ ಇರುವ ಹಾಗೆ ಬಾಯಿ ಇಲ್ಲಾ. ಅದು ಬೇಕು ಇದು ಬೇಕು ಎಂದು ಹೇಳಲಾರವು. ಇದನ್ನು ಜ್ಞಾಪಕದಲ್ಲಿ ಇಟ್ಟು ಸಮಯ ಸಮಯಕ್ಕೆ ಕುಡಿಯಲಿಕ್ಕೂ ತಿಂನಲಿಕ್ಕೂ ಹಾಕ ಬೇಕು. ಮೃಗಗಳು ನಮ್ಮ ಹಾಗೆ ಸುಖ ದುಖ್ಖಗಳನ್ನು ಅನುಭವಿಸುತ್ತವೆ ಎಂದು ನೆನಸಿ, ಅವುಗಳನ್ನು ಸುಮ್ಮನೆ ಬಾಧಿಸ ಬಾರದು.

೪೪. ಥ ಥಾ ಥಿ ಥು ಥೆ ಥೊ 44.

ಗ್ರಂಥ | ಅಂಥಾ | ಪ್ರಾರ್ಥಿಸು | ಸ್ಥಾವರ | ಪದಾರ್ಥ | ಸ್ಥಿರ | ಸಾಮರ್ಥ್ಯ | ವ್ಯರ್ಥ

ವೃಕ್ಷವು ಎಂಥಾದೋ ಬೀಜವು ಅಂಥಾದೆ. ಪಾಪ ಪುಣ್ಯಾಗಳು ಎಂಥಾವೋ ಅನುಭವ ಅಂಥಾವೆ.

ಮುಂಜಾನೆ ಎದ್ದು ದೇವರನ್ನು ದ್ಯಾನಿಸಿ ನಮ್ಮ ಕಾಪಾಡು ಎಂತ ಪ್ರಾರ್ಥಿಸ ಬೇಕು.

ಈ ಪುಸ್ತಕ ಕಾಗದದಿಂದ ಮಾಡಿಯದೆ. ಕಾಗದ ವಸ್ತ್ರದ ಚಿಂದಿಗಳಿಂದಾಗುತ್ತದೆ. ವಸ್ತ್ರ ಹತ್ತೀ ನೂಲಿನಿಂದ ಮಾಡೋಣಾಗುತ್ತದೆ. ಹತ್ತಿಗಿಡಗಳು ಇಂದ್ಯಾ ದೇಶದಲ್ಲಿ ಸಾಧಾರಣ. ಕಾಗದ ಪತ್ರಿಕೆ ಗ್ರಂಥ ಮೊದಲಾದ್ದನ್ನು ಬರೆಯಲಿಕ್ಕೆ ಉಪಯೋಗವು. ಪೂರ್ವ ಕಾಲದಲ್ಲಿ ಇದ್ದಂಥವರು ಅಂಥಾ ಕಾಗದ ಇಲ್ಲದೆ ಇರುವದರಿಂದ ಓಲೆಯಲ್ಲಿಯೂ ತಾಂಬ್ರದ ರೇಖುಗಳಲ್ಲಿಯೂ ಬರೆಯುತ್ತಾ ಇದ್ದರು.

೪೫. ಠ ಠಾ ಠಿ ಠು ಠೆ ಠೊ 45.

ಪಾಠ | ಕಠಿಣ | ಠಾವು | ಠಾಣ್ಯಾ | ಠೀಕು | ಕಠೋರ | ಶ್ರೇಷ್ಠ | ಠಕ್ಕ | ಠಿಕಾಣಿ | ಪಠ

ಪೋಲಿಸ್ಸು ಪ್ಯಾದೆಗಳು ಕೂಡಿರುವ ಠಾವಿಗೆ ಠಾಣ್ಯಾವೆಂದು ಹೇಳುತ್ತಾರೆ.

ಈ ಪಾಠವನ್ನು ನಿನ್ನ ಭಾಷೆಯಲ್ಲಿ ಠೀಕು ಮಾಡಿ ಹೇಳು.

ಅಲ್ಪವಾದ ತಪ್ಪಿಗೆ ಕಠೋರಮಾತಾಡುವದು ಕಠಿಣ ಹೃದಯದವನ ಕೆಲಸವೇ.

ಅವನು ಠಕ್ಕನು; ಅವನ ಠಾವು ಠಿಕಾಣಿ ನನಗೆ ಗೊತ್ತು ಇಲ್ಲಾ.

ಒಂದೇ ಶಾಲೆಯಲ್ಲಿ ಸಂಗಡ ಕಲಿಯುವವರು ಸಹ ಪಾಠಿಗಳಾಗುತ್ತಾರೆ.

ಭೂಗೋಳ ವಿದ್ಯ ಕಲಿಸಲಿಕ್ಕೆ ಪಠಗಳು ಅವಶ್ಯವಾಗಿ ಇರುತ್ತವೆ.

ಆಕಾಶವು ದೇವರ ಸಿಂಹಾಸನವು; ಭೂಮಿಯು ಅವನ ಪಾದ ಪೀಠವೆ.

ಹುಡುಗರು ಮನೆಯಲ್ಲಿರುವಾಗ್ಯೆ ತಾಯಿ ತಂದೆಗಳಿಗೆ ವಿಧೇಯರಾಗಿರ ಬೇಕು; ಪಾಠಶಾಲೆಯಲ್ಲಿ ಐಯ್ಯನವರು ಹೇಳಿದಂತೆ ನಡದು ಕೊಳ್ಳ ಬೇಕು; ಶಾಲೆಗೆ ಹೋಗುವ ಸಮಯ ತಪ್ಪಿಸ ಬಾರದು. ಎಲ್ಲಾ ಹುಡುಗರಿಗಿಂತಲೂ ತಾನು ತನ್ನ ಪಾಠವನ್ನು ತೀವ್ರವಾಗಿ ಕಲಿಯ ಬೇಕೆಂಬ ಸಾಭಿಮಾನ ಹಿಡಿಯ ಬೇಕು; ಪಾಠ ಎಷ್ಟು ಕಠಿಣವಾದರೂ ಪ್ರಯತ್ನ ಮಾಡಿದರೆ ಕಲಿಯ ಬಹುದು; ಸಾಲೆಗೆ ಹೋಗುವಾಗ್ಯೆ ತುಂಟ ಹುಡುಗರು ಆಡಲಿಕ್ಕೆ ಕರದರೆ ಅವರ ಸಂಗಡ ಆಡಲಿಕ್ಕೆ ಹೋಗ ಬಾರದು.

೪೬. ಛೆ ಛಾ ಛಿ ಝು ಝಾ ಝಿ 46.

ಝುಗಝುಗಿಸು | ಝಾಡಿಸು | ತುಛ | ಸ್ವೇಛ | ಝುಗಳ | ಛಾಯೆ | ಛಳಿ | ಛಾವಣಿ

ಆಕಾಶದಲ್ಲಿ ಮಿಂಚು ಝುಗಝುಗಿಸಲು ಮಳೆ ಬರುವ ಕುರುಹು.
ಕಾಲಿನ ಧೂಳನ್ನು ಝಾಡಿಸದೆ ಇದ್ದರೆ ಕಣ್ಣಿಗೆ ಬಾಧಕವು.
ಪರರನ್ನು ತುಛೀಕರಿಸುವದು ನೀಚರ ಲಕ್ಷಣವಾಗಿರುತ್ತದೆ.
ಘನವಂತರು ಸ್ವೇಛೆಯಿಂದ ಝುಗಳಗಳನ್ನು ಹತ್ತಿಸುವದಿಲ್ಲ.
ಛಾಯಾಗಣಿತದಿಂದ ಎಷ್ಟು ಹೊತ್ತಾಯಿತೆಂತ ಶೀಘ್ರ ತಿಳಿಯ ಬಹುದು.
ಛಳಿಕಾಲದಲ್ಲಿ ಛಳಿ ಹೆಚ್ಚು; ಮನೆಗಳೆಲ್ಲಾ ಛಾವಣಿಯಾಗಿ ಸಿದ್ಧವಾಗಿರ ಬೇಕು.

ಕಾಲಭೇದಗಳು.

ಅರುವತ್ತು ವಿಘಳಿಗೆಗೆ ಒಂದು ಘಳಿಗೆ. ಅರುವತ್ತು ಘಳಿಗೆಗೆ ಒಂದು ದಿನ. ಏಳುವರೆ ಘಳಿಗೆಗೆ ಒಂದು ಝಾಮು. ಅಂಥಾ ಝಾಮುಗಳು ಎಂಟು ಶೇರಿದರೆ ಒಂದು ದಿನ. ಹಗಲು ನಾಲ್ಕು ಝಾಮುಗಳು—ರಾತ್ರಿ ನಾಲ್ಕು ಝಾಮುಗಳು. ಏಳು ದಿನಗಳು ಶೇರಿದರೆ ಒಂದು ವಾರವು. ಒಂದು ತಿಂಗಳಿಗೆ ದಿನಗಳು ಸರಾಸರಿ ಮೂವತ್ತು ಆಗುತ್ತದೆ. ಎರಡು ತಿಂಗಳು ಶೇರಿ ಒಂದು ಋತು ಆಗುತ್ತದೆ. ಅಂಥಾ ಋತುಗಳು ಆರು ಶೇರಿದರೆ ಒಂದು ಸಂವತ್ಸರವು.

ಚೈತ್ರವೈಶಾಖ ವಸಂತ ಋತು. ಜ್ಯೇಷ್ಟ ಆಷಾಡ ಘ್ರೀಷ್ಮ ಋತು. ಶ್ರಾವಣ ಭಾದ್ರಪದ ವರ್ಷ ಋತು. ಆಶ್ವೀಜ ಕಾರ್ತೀಕ ಶರದೃತು. ಮಾರ್ಗಶಿರ ಪುಷ್ಯ ಹಿಮವಂತ ಋತು. ಮಾಘ ಫಾಲ್ಗುಣ ಶಶಿ ಋತು.

ಪುಷ್ಯ ಮಾಸದಲ್ಲಿ ಸುಗ್ಗಿ ಬೆಳೆಯನ್ನು ಕೊಯ್ಯುತ್ತಾರೆ. ಮಾಘ ಮಾಸದಲ್ಲಿ ಕೊಳಕೆ ಬೆಳೆಯನ್ನು ಬಿತ್ತುತ್ತಾರೆ. ಮತ್ತು ಫಲವೃಕ್ಷಗಳಿಗೆ ಚನ್ನಾಗಿ ಹೂವು ಬರುತ್ತದೆ. ಫಾಲ್ಗುಣ ಮಾಸದಲ್ಲಿ ಕೊಳಕೆ ಬೆಳೆ ಬೆಳೆಯುತ್ತದೆ. ಚೈತ್ರ ಮಾಸದಲ್ಲಿ ಕೊಳಕೆ ಬೆಳೆಯನ್ನು ಕೊಯ್ಯುತ್ತಾರೆ. ವೈಶಾಖ ಮಾಸದಲ್ಲಿ ಫಲಗಳು ಹಂಣಾಗುತ್ತವೆ. ಜ್ಯೇಷ್ಟ ಮಾಸದಲ್ಲಿ ಏಣಿಲು ಬೆಳೆ ಬಿತ್ತುತ್ತಾರೆ; ನೇಜಿ ಹಾಕುತ್ತಾರೆ; ವ್ಯಾಪಾರಗಳು ಮುಗಿಯುವವು. ಆಷಾಡ ಮಾಸದಲ್ಲಿ ಏಣಿಲು ಬೆಳೆ ಬೆಳೆಯುತ್ತದೆ; ನೇಜಿಯನ್ನು ತೆಗದು ಮತ್ತೊಂದು ಗದ್ದೆಯಲ್ಲಿ ನಡುತ್ತಾರೆ. ಶ್ರಾವಣ ಮಾಸದಲ್ಲಿ ಫಲ್ಯಕಾಯಿ ಹೆಚ್ಚಾಗಿ ಆಗುತ್ತದೆ. ಭಾದ್ರಪದದಲ್ಲಿ ಬೆಳೆ ಪುಷ್ಟಿಯಾಗಿ ಫಲಿಸುತ್ತದೆ. ಆಶ್ವೀಜ ಕಾರ್ತೀಕ ಮಾಸಗಳಲ್ಲಿ ಏಣಿಲು ಬೆಳೆ ಕೊಯ್ಯಲಿಕ್ಕೆ ಸಿದ್ಧವಾಗುತ್ತದೆ; ಸುಗ್ಗಿ ಬೆಳೆ ಬಿತ್ತುತ್ತಾರೆ. ಮಾರ್ಗಶಿರದಲ್ಲಿ ಸುಗ್ಗಿ ಬೆಳೆ ಬೆಳಿಸುತ್ತಾರೆ. ಜ್ಯೇಷ್ಟ ಆಷಾಡ ತಿಂಗಳುಗಳಲ್ಲಿ ಮಳೆ ಬಹಳ ಹೆಚ್ಚು. ಶ್ರಾವಣದಲ್ಲಿ ಸ್ವಲ್ಪ ತಗ್ಗುತ್ತದೆ.

೪೭. ಔ ೌ ಕೌ ಗೌ ಘೌ ಅಃ ಃ ತಃ 47.

ಔಷಧ	ಪೌರ್ಣಿಮಿ	ಗೌಜಿ	ಔಧಾರ್ಯ	ಯೌವನ	ಪೌನು	ಅಂತಃಕರುಣ
ಔಸ್ತ್ರಾಲ್ಯ	ಮೌನವು	ಬೌದ್ಧ	ಔಚಿತ್ಯ	ಮನಃಪೂರ್ವಕ		ಅಂತಃಕರುಣಿ

ಭೂಪಠದಲ್ಲಿ ಆಸ್ಯ, ಯೂರೋಪು, ಅಫ್ರಿಕ, ಅಮೆರಿಕ, ಔಸ್ತ್ರಾಲ್ಯ ಎಂಬ ಐದು ಭೂಖಂಡಗಳು ಕಾಣುತ್ತವೆ.

ಔಷಧ ಖೈ ಆಗಿದ್ದರೂ ರೋಗಸ್ಥರ ದೇಹಕ್ಕೆ ಆರೋಗ್ಯ ಕೊಡುತ್ತದೆ.

ಪೂರ್ಣ ಚಂದ್ರ ಇರುವ ದಿವಸಕ್ಕೆ ಪೌರ್ಣಿಮಿ ಇಲ್ಲವೆ ಹುಣ್ಣಿಮೆ ಅನ್ನುತ್ತಾರೆ.

ಮಠದಲ್ಲಿ ಗೌಜಿ ಮಾಡದೆ ಮೌನವಾಗಿ ಕೂತು ಕೊಂಡು ಪಾಠ ಕಲಿಯ ಬೇಕು.

ಔದಾರ್ಯ ಮನುಷ್ಯನು ಔಚಿತ್ಯ ಕೆಲಸಗಳಲ್ಲಿ ಖರ್ಚು ಮಾಡಲಿಕ್ಕೆ ಅಂಜನು.

ಲೋಹಗಳು.

ಈ ಲೋಕದಲ್ಲಿ ಲೋಹಗಳು ಅನೇಕ ಇರುತ್ತವೆ. ಅವುಗಳಲ್ಲಿ ಚಿನ್ನ ಬೆಳ್ಳಿ ತಾಂಬ್ರ ಕಬ್ಬಿಣ ಸೀಸ ಇವು ಐದು ಪಂಚಲೋಹಗಳೆಂದು ಹೇಳಲ್ಪಡುತ್ತವೆ. ಈ ಐದು ಲೋಹಗಳೊಳಗೆ ಭಂಗಾರಕ್ಕೆ ಕ್ರಯ ವಿಶೇಷವಾಗಿದ್ದರೂ ಕಬ್ಬಿಣ ಬಹಳ ಉಪಯೋಗವಾಗಿರುತ್ತದೆ. ನಾಣ್ಯಗಳು, ಹೆಚ್ಚು ಬೆಲೆಯುಳ್ಳ ಆಭರಣಗಳು, ಸೂಜಾಪಾತ್ರೆಗಳು, ಸಂಸ್ಥಾನಕ್ಕೆ ತಕ್ಕ ವಿಚಿತ್ರವಾದ ಪಾತ್ರೆಗಳು, ಘಡಿಯಾರಗಳು, ಇವು ಮೊದಲಾದವು ಭಂಗಾರದಿಂದ ಮಾಡಲ್ಪಡುತ್ತವೆ. ನಾಣ್ಯಗಳೊಳಗೆ ಕೆಲವು, ಭೋಜನ ಪಾತ್ರೆಗಳೊಳಗೆ ಕೆಲವು, ತಟ್ಟೆಗಳು ಮೊದಲಾದವು ಕೆಲವು, ಆಭರಣಗಳು ಕೆಲವು, ಘಡಿಯಾರಗಳು ಕೆಲವು ಸಹಾ ಬೆಳ್ಳಿಯಿಂದ ಮಾಡುತ್ತಾರೆ. ಮತ್ತು ನಾಣ್ಯಗಳು ಕೆಲವು ತ್ರಾಸುಗಳು, ಮನೆಯ ಪಾತ್ರಗಳು ಶಾಸನಗಳು ಇವು ಮೊದಲಾದವು ತಾಂಬ್ರದಿಂದಲೂ, ನಾನಾ ವಿಧವಾದ ಆಯುಧಗಳು, ನಾನಾ ವಿಧವಾದ ಯಂತ್ರಗಳು ಇವು ಮೊದಲಾದ ಉಪಯೋಗ ಸಾಧನೆಗಳು ಕಬ್ಬಿಣ ದಿಂದಲೂ ಮಾಡುತ್ತಾರೆ. ಚಿನ್ನದಿಂದ ಮೊಹೊರಿ, ಪೌನು, ಇಸ್ತಾಂಬೂಲು, ಕುರುಜಾತು ಮುಂತಾದ ನಾಣ್ಯಗಳನ್ನು ಮಾಡುತ್ತಾರೆ. ಬೆಳ್ಳಿಯಿಂದ ರೂಪಾಯಿ, ಪಾವಲಿ, ದೋನಾಣೆ ಮುಂತಾದ ನಾಣ್ಯಗಳಾಗುತ್ತವೆ. ತಾಂಬ್ರದಿಂದ ಅರ್ಧಾಣೆ, ಪಾವಾಣೆ, ರುವಿ ಮುಂತಾದ ನಾಣ್ಯಗಳನ್ನು ಮಾಡುತ್ತಾರೆ. ತುಪಾಕಿ ಗುಂಡುಗಳೂ ರವೆಗಳೂ ಮುದ್ರಾಕ್ಷರಗಳೂ ಇವು ಮೊದಲಾದವು ಸೀಸದಿಂದ ಆಗುತ್ತವೆ.

೪೮. ಆತ್ಮ, ಮೋಕ್ಷ, ದೇವರು. 48.

ನಾವು ಜೀವಿಸುವ ಕಾಲವು ಬಹಳ ಕೊಂಚವಾಗಿ ಇಧೆ. ನಮಗೆ ಶರೀರವು ಆತ್ಮವು ಉಂಟು. ಆತ್ಮವು ಶರೀರಕ್ಕಿಂತ ಬೇರೆಯಾಗಿದೆ. ಈಗ ಈ ಎರಡು ಒಂದಾಗಿ ಕಾಣ ಬರುತ್ತಿದ್ದಾಗ್ಯೂ ನಮ್ಮ ಜೀವಕಾಲ ತೀರಿದ ತರುವಾಯ ಅವು ಬೇರೆ ಬೇರೆ ಬಿದ್ದು ಹೋಗುವವು. ಕಡೆಗೆ ಈ ಶರೀರವು ಮಂಣಿನ ಪಾಲಾಗುವದು. ಆತ್ಮವು ಹಾಗೆ ಅಲ್ಲ; ಅದು ಯಾವ ಕಾಲದಲ್ಲಿಯೂ ನಾಶವನ್ನು ಹೊಂದದು. ನಾವು ಸತ್ತ ತರುವಾಯ ನಮ್ಮ ಆತ್ಮವು ಪರಲೋಕವನ್ನು ಸೇರುವದು. ಭಕ್ತರು ದೇವರ ಸನ್ನಿಧಿಯಲ್ಲಿ ಬಂದು ನಿತ್ಯಸೌಖ್ಯವನ್ನು ಪಡ ಕೊಳ್ಳುತ್ತಾರೆ. ಪಾಪಾತ್ಮರು ನರಕದಲ್ಲಿ ಬಿದ್ದು ಹೆಚ್ಚಾಗಿ ಯಾತನೆ ಪಡುತ್ತಾರೆ.

ನಾವು ದೇವರ ಕೈಯಿಂದಲೇ ಉಂಟು ಮಾಡಲ್ಪಟ್ಟವರು. ದೇವರು ಇತರರಿಂದ ಉಂಟಾದಂಥವನಲ್ಲ. ದೇವರು ರೂಪವಿಲ್ಲದಂಥವನಾಗಿದ್ದಾನೆ. ಆತನನ್ನು ನೋಡು ವದು ಅಸಾಧ್ಯ. ಆತನು ಎಲ್ಲಿಯೂ ಇರುವವನಾಗಿ, ಸಮಸ್ತವನ್ನು ತಿಳ ಕೊಂಡಿ ದ್ದಾನೆ. ದೇವರು ಇಲ್ಲದ ಸ್ಥಳವೂ ತಿಳಿಯದ ವಸ್ತೂ ಇಲ್ಲ; ನನ್ನ ಮನಸ್ಸಿನಲ್ಲಿ ಇರುವದು ಸಹ ಆತನಿಗೆ ತಿಳಿಯುವದು. ದೇವರು ಸರ್ವಶಕ್ತನು; ಸಕಲ ಕೆಲಸವನ್ನು ಮಾಡುವದು ಆತನಿಗೆ ತೃಣ ಮಾತ್ರವಾಗಿರುವದು. ಆತನಿಗೆ ಆದಿಯೂ ಅಂತ್ಯವೂ ಇಲ್ಲ. ಲೋಕದಲ್ಲಿ ಇರುವ ವಸ್ತುಗಳೆಲ್ಲಾ ಮಾರ್ಪಟ್ಟು ಲಯವಾಗಿ ಹೋಗ ತಕ್ಕವು. ದೇವರು ತಾನು ಉಂಟು ಮಾಡಿದ ಎಲ್ಲವುಗಳನ್ನು ಕಾಪಾಡುತ್ತಾನೆ. ಆತನು ತಾನು ನಿರ್ಮಿಸಿದ ಲೋಕವೆಲ್ಲಾನ್ನು ಪಾಲಿಸುತ್ತಾ ಇದ್ದಾನೆ. ಆತನಿಗೆ ಯಾರೂ ಸಮಾನವಿಲ್ಲ. ದೇವರು ಕೇವಲ ಪರಿಶುದ್ಧನು. ಆತನ ಸಮೀಪದಲ್ಲಿ ಎಷ್ಟು ಮಾತ್ರವೂ ದೋಷವಿಲ್ಲ. ಆತನು ನೀತಿವಂತನಾದ್ದರಿಂದ ವಂಚನೆ ಮುಂತಾದ ಪಾಪ ಮಾಡಿದವರನ್ನು ದಂಡಿಸುವನು. ಒಳ್ಳೆಯವರ ಮೇಲೆ ಆತನು ದಯ ಇಡುತ್ತಾನೆ.

ಇಂಥಾ ಮಹಿಮೆಯುಳ್ಳ ದೇವರ ಆಶ್ರಯವನ್ನು ಹೊಂದಿದರೆ ನಾವು ಬಹಳ ಧನ್ಯರಾಗದೆ ಹೋಗೆವು!

ಆದದರಿಂದ ಸುಳ್ಳು ಹೇಳ ಬಾರದು; ಕದಿಯ ಬಾರದು; ಮೋಸ ಮಾಡ ಬಾರದು; ಅಂಥಾ ಕೆಟ್ಟ ಕೆಲಸ ಮಾಡುವ ದುಷ್ಟ ಹುಡುಗರ ಸಹವಾಸ ಮಾಡ ಬಾರದು; ಕೆಟ್ಟ ಪದ್ಧತಿಗಳನ್ನು ಅನುಸರಿಸ ಬಾರದು; ಕೆಟ್ಟ ಮಾತುಗಳನ್ನು ಆಡ ಬಾರದು; ಕೇಡಿಗೆ ಕೇಡು ಮಾಡ ಬಾರದು.

೪೯. I. ವಿಭಕ್ತಿಗಳು ಏಳು ಇರುತ್ತವೆ. ಅವು ಯಾವವಂದರೆ:— 49.

ಅಂಕಾಸಂಜ್ಞೆ	ಕಾರಕಾರ್ಥಸಂಜ್ಞೆ	ಉದಾಹರಣೆ	ಪ್ರತ್ಯಯ
ಪ್ರಥಮೆ	ಕರ್ತೃವಿಭಕ್ತಿ	ರಾಮನು ಓದುತ್ತಾನೆ	ಉ
ದ್ವಿತೀಯೆ	ಕರ್ಮವಿಭಕ್ತಿ	ಮರವನ್ನು ಕಡದನು	ಅನ್ನು
ತೃತೀಯೆ	ಕರಣವಿಭಕ್ತಿ	ಲೇಖಣಿಯಿಂದ ಬರೆಯುತ್ತಾನೆ	ಇಂದ
ಚತುರ್ಥಿ	ಸಂಪ್ರಯೋಗವಿಭಕ್ತಿ	ಕಕ್ಕನಿಗೆ ಕೊಡುತ್ತಾನೆ	ಕ್ಕೆ, ಗೆ, ಇಗೆ
ಪಂಚಮಿ	ಅಪಾದಾನವಿಭಕ್ತಿ	ಮೇಘದ ದೆಶೆಯಿಂದ ಮಳೆ ಬಿತ್ತು	ದೆಶೆಯಿಂದ
ಷಷ್ಟಿ	ಸಂಬಂಧವಿಭಕ್ತಿ	ದೇವರ ಶಿಕ್ಷೆ ತಪ್ಪಿಸ ಕೂಡದು	ಅ
ಸಪ್ತಮಿ	ಅಧಿಕರಣವಿಭಕ್ತಿ	ಮನೆಯಲ್ಲಿ ಇದ್ದಾನೆ	ಅಲ್ಲಿ

II. ಪುರುಷಗಳು ಮೂರು. ಅವು ಯಾವವಂದರೆ:—

ಹೆಸರು	ವಿವರಣೆ	ಉದಾಹರಣೆ
ಉತ್ತಮಪುರುಷ	ಯಾರು ಮಾತಾಡುತ್ತಾನೊ ಅವರು	ನಾನು ಹೇಳುತ್ತೇನೆ
ಮಧ್ಯಮಪುರುಷ	ಯಾರು ಸಂಗಡ ಮಾತಾಡುತ್ತಾನೊ ಅವರು	ನೀನು ಕೇಳುತ್ತಿ
ಪ್ರಥಮಪುರುಷ	ಯಾರ ವಿಷಯವಾಗಿ ಮಾತಾಡುತ್ತಾನೊ ಅವರು	ಅವನು ನೋಡುತ್ತಾನೆ

III. ಲಿಂಗಗಳು ಮೂರು. ಅವು ಯಾವವಂದರೆ:—

ಹೆಸರು	ವಿವರಣೆ	ಉದಾಹರಣೆಗಳು
ಪುಲ್ಲಿಂಗ	ಅಂದರೆ ಗಂಡು	ತಂದೆ, ಅಂಣ, ರಾಮನು
ಸ್ತ್ರೀಲಿಂಗ	ಅಂದರೆ ಹೆಂಣು	ತಾಯಿ, ಅಕ್ಕ, ಗಂಗಮ್ಮ
ನಪುಂಸಕಲಿಂಗ	ಅಂದರೆ ವಿಶೇಷ ಜ್ಞಾನವಿಲ್ಲದ್ದು	ಕುರಿ, ಎತ್ತು, ಎಮ್ಮೆ; ಕಲ್ಲು; ಘಾಳಿ; ಸುಖ

IV. ವಚನಗಳು ಎರಡು. ಅವು ಯಾವವಂದರೆ:—

ಹೆಸರು	ವಿವರಣೆ	ಉದಾಹರಣೆಗಳು
ಏಕವಚನ	ಒಂದೇ ವಸ್ತುವನ್ನು ಹೇಳುತ್ತದೆ	ಮರ, ಕಾಗದ, ಕುರಿ
ಬಹುವಚನ	ಬಹಳ ವಸ್ತುವನ್ನು ಹೇಳುತ್ತದೆ	ಮರಗಳು, ಕಾಗದಗಳು, ಕುರಿಗಳು

V. ಕಾಲಗಳು ಮೂರು ಇರುತ್ತವೆ. ಅವು ಯಾವವಂದರೆ:—

ಹೆಸರು	ವಿವರಣೆ	ಉದಾಹರಣೆಗಳು
ವರ್ತಮಾನ ಕಾಲ	ನಡಿಯುವ ಕಾಲ	ಈಗ ನಾನು ಸಂಣ ಹುಡುಗನಾಗಿ ಇರುತ್ತೇನೆ
ಭೂತಕಾಲ	ಹೋದ ಕಾಲ	ಕೆಲವು ವರ್ಷಗಳ ಹಿಂದೆ ಮಗುವಾಗಿ ಇದ್ದೆನು
ಭವಿಷ್ಯತ್ಕಾಲ	ಬರುವ ಕಾಲ	ಮೂವತ್ತು ವರ್ಷಗಳ ಮೇಲೆ ಪ್ರಾಯಸ್ಥನಾಗಿ ಇರುವೆನು

೫೦. 50.

1\. ೧. ದೇವರು ಒಬ್ಬನೇ.

2\. ೨. ಇಹ ಪರಗಳು ಎರಡು ಉಂಟು.

3\. ೩. ಕಾಲಗಳು ಮೂರು. ಭೂತ, ಭವಿಷ್ಯತ್ತು, ವರ್ತಮಾನ.

4\. ೪. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂದು ನಾಲ್ಕು ದಿಕ್ಕುಗಳುಂಟು.

5\. ೫.

ತ್ವಕ್	ಚಕ್ಷು	ಶ್ರೋತ್ರ	ರಸನ	ಘ್ರಾಣ	ಇವು ಪಂಚೇಂದ್ರಿಯಗಳು
ಚರ್ಮ	ಕಣ್ಣು	ಕಿವಿ	ನಾಲಿಗೆ	ಮೂಗು	ಇವು ಕರಣಗಳು
ಸ್ಪರ್ಶ	ರೂಪ	ಶಬ್ದ	ರಸ	ಗಂಧ	ಇವು ಐದು ವಿಷಯಗಳು

6\. ೬. ರಸಗಳು ಆರು:—ಶೀ, ಕಹಿ, ಉಪ್ಪು, ಒಗರು, ಖಾರ, ಹುಳಿ.

7\. ೭. ಆದಿತ್ಯವಾರ, ಸೋಮವಾರ, ಮಂಗಳವಾರ, ಬುಧವಾರ, ಬೃಹಸ್ಪತಿವಾರ, ಶುಕ್ರವಾರ, ಶನಿವಾರ ಇವು ಏಳು ವಾರಗಳು.

8\. ೮. ಸ್ಪರ್ಶಗಳು ಎಂಟು:—ಉಷ್ಣ, ಶೀತ, ಮೃದು, ಕಠಿಣ, ಲಘು, ಭಾರ, ತೆಳು, ದಟ್ಟ.

9\. ೯. ನವರತ್ನಗಳು ಒಂಭತ್ತು:—ಗೋಮೇಧಿಕ, ನೀಲ, ಹವಳ, ಪುಶ್ಯರಾಗ, ಮರಕತ, ಮಾಣಿಕ್ಯ, ಮುತ್ತು, ವೈಢೂರ್ಯ, ವಜ್ರ.

ನವಧಾನ್ಯಗಳು ಒಂಭತ್ತು:—ಭತ್ತ, ಗೋಧಿ, ಕಡ್ಲೆ, ತೊಗರಿ, ಹುರುಳಿ, ಎಳ್ಳು, ಅವರೆ, ಉದ್ದು, ಹೆಸರು.

ಯಾವನು ಜಗತ್ತನ್ನು ಆಳುತ್ತಾನೆ.
ಯಾವನಿಂದ ಈ ಲೋಕ ಉಂಟಾಯಿತು?
ಯಾವನಲ್ಲಿ ದೋಷವಿಲ್ಲ?

ಕಷ್ಟವು ನಾಚಿಕೆಯು ಯಾವದರ ಫಲ?
ಮನುಷ್ಯರಿಗೂ ಮೃಗಗಳಿಗೂ ವ್ಯತ್ಯಾಸ ಏನು?
ಔಷಧ ಯಾವಾಗ ಮತ್ತು ಯಾಕೆ ಬೇಕು?

ಮೂರ್ಖರಾಗಿರುವಂಥ ಹುಡುಗರಿಗೆ ಏನು ಮಾಡ ಬೇಕು?
ಮೈಯು, ಮನೆಯು, ಬಟ್ಟೆಯು ಹ್ಯಾಗೆ ಇರ ಬೇಕು?
ಜ್ವರ, ವಾಂತಿ, ಭ್ರಾಂತಿ ಮುಂತಾದ ರೋಗಗಳು ಯಾವದರಿಂದ ಬರುತ್ತವೆ?
ಎಂಥಾ ಮಗನಲ್ಲಿ ತಂದೆಯು ಸಂತೋಷ ಪಡುತ್ತಾನೆ?
ಬೋಧಕರು ಯಾವದರಲ್ಲಿ ಬಹಳ ಆನಂದವನ್ನು ಪಡುತ್ತಾರೆ?
ಎಂಥಾ ಮಗಳು ತಾಯಿಗೆ ಅಧಿಕ ದುಖ್ಖವನ್ನು ಉಂಟು ಮಾಡುತ್ತಾಳೆ?

ಸಂಪೂರ್ಣವು.

ಅಭ್ಯಾಸಗಳು.

ಚೈತನ್ಯ	ಸ್ವಭಾವ	ಘಾತ	ಕ್ಷೌರ	ಪಾಳ್ಯ	ಥಳಥಳನೆ
ಝೇಂಕಾರ	ಅಧ್ವಾನ	ಝಾಡು	ಅಗ್ನಿ	ಅರ್ಕ	ಷಣ್ಮುಖಿ
ಛೋಜಿಗ	ತ್ವರಿತ	ಢಿಲ್ಲಿ	ಲುಬ್ಧ	ಜ್ವಾಲೆ	ವಾಗ್ವಾದ
ಅದ್ಭುತ	ತಪಸ್ಸು	ಥೈಲಿ	ರಕ್ತ	ಪೃಥ್ವಿ	ಮಹಾರಾಷ್ಟ್ರ
ಸ್ಫಟಿಕ	ನಿಸ್ಸಾರ	ಘೋಷ	ಶ್ಲೇಷ್ಮ	ಅರ್ಹ	ಯಜ್ಞವಲ್ಕ್ಯ
ಸ್ಮಶಾನ	ಅಗಸ್ತ್ಯ	ರಥ	ಸ್ಮೃತಿ	ಮರ್ತ್ಯ	ಸಂರಕ್ಷಣೆ
ಉಛ್ವಾಸ	ಲಂಘನೆ	ಕ್ಷೇದ	ಸ್ಮಶ್ರು	ದಂಷ್ಟ್ರ	ಮಂತ್ರ್ಯಾದಿ
ಚಂಚಲ	ಸಂಪಿಗೆ	ತಾರ್ಕ್ಷ್ಯ	ಮ್ಲೇಂಛ	ಕಂಠ್ಯ	ಶಕ್ತ್ಯಾನುಸಾರ
ಉಷ್ಟ್ರ	ಅಪ್ಸರ	ಸ್ತಂಭ	ಸಿಂಹ	ತ್ರ್ಯಕ್ಷ	ತತ್‌ಕ್ಷಣ

ಕೆಲವು ಅಕ್ಷರಗಳಿಗೆ ಬೇರೆ ರೂಪಗಳುಂಟು: ಅಂದರೆ:—

ಆ=ಅ; ಈ=ಈ; ಭ=ಭ; ಹ=ಹ; ಘ=ಘ.

ಕಚೇರಿಯಲ್ಲಿ ರೂಢಿಯಾದ ಇಂಗ್ಲಿಷ ಶಬ್ದಗಳೂ ಮತ್ತು ಅರ್ಥಗಳೂ.

ಅಶಿಷ್ಟಾಂಟ್=ಸಹಾಯಕನು (ಉಪ)	ಡಿಕ್ರಿ=ತೀರ್ಪು, ಸಿದ್ಧಾಂತ
ಆಕ್ಟಿಂಗ್=ತತ್ಕಾಲಕ್ಕೆ; ಹಂಗಾಮಿ	ಡಿಪ್ಯುಟಿ=ಕೆಳಗಿನ, ಉಪ.
ಆಪಿಲ್=ಮೇಲಧಿಕಾರಿಗೆ ಮಾಡುವ ಅರ್ಜಿ	ನೋಟಿಸ್=ಪ್ರಕಟಣೆ
ಇನ್ಸಪೆಕ್ಟರ್=ಅಧ್ಯಕ್ಷನು	ಪೋಲಿಸ್=ಪ್ರಜಾರಕ್ಷಣೆಯ
ಕಮಿಟಿ=ವಿಚಾರಣೆ ಸಭೆ	ಪ್ರೊಶಿಡಿಂಗ್ಸ=ನಡವಳಿತೆ
ಕಮಿಶನರ್=ವಿಚಾರಣೆ ಸಭೆಯವನು	ಬೋರ್ಡು=ಸಭೆ
ಕಲ್ಕಟರ್=ಕಂದಾಯ ವಸೂಲು ಮಾಡುವವ	ಮುನ್ಸಿಪೆಲ್=ನಗರ ವಿಷಯದ
ಕೋರ್ಟು=ನ್ಯಾಯಸ್ಥಾನ	ಮೆಂಬರ್=ಅಂಶಕರು
ಕ್ರಿಮಿನಾಲ್=ತಪ್ಪುಗಳ ವಿಷಯದ	ಮೆಜಿಸ್ಟ್ರೇಟು=ದಂಡನಾಧಿಕಾರಿ
ಕ್ಲಾರ್ಕ=ಗುಮಾಸ್ತ	ವಾರಾಂಟು=ಕೈಹಿಡಿ ಪತ್ರಿಕೆ
ಜಡ್ಜ=ನ್ಯಾಯಾಧಿಪತಿ	ಸಬ್ಬೋರ್ಡಿನೇಟ್=ಕೆಳಗಿನ (ಉಪ)
ಜುಡಿಶ್ಯಾಲ್=ನ್ಯಾಯಾಧಿಪತ್ಯದ ವಿಷಯದ	ಸುಪರಿಂಟೆಂಡೆಂಟ್=ಮೇಲ್ವಿಚಾರಕ

ಧಾತುಪ್ರಯೋಗ.

ಚರ್=ನಡಿ; ಇದರಿಂದ ಹುಟ್ಟುವದು:—ಆಚರಿಸು, ಸಂಚರಿಸು, ವಿಚಾರಿಸು, ಆಚಾರ, ಚರಣ, ಗೋಚರ, ಖೇಚರ. ಯುಜ್=ಕಟ್ಟು; ಯೋಜನ, ಪ್ರಯೋಜನ, ಯೋಗ, ಯೋಗ್ಯ, ಪ್ರಯೋಗ, ಯುಕ್ತ, ಸಂಯುಕ್ತ, ವಿಯುಕ್ತ, ಯುಗ, ಯೋಗಿ. ಕಟ್ಟು=ಕಟ್ಟುವಿಕೆ, ಕಟ್ಟಳೆ, ಕಟ್ಟೆ, ಕಟ್ಟಿಗೆ, ಅಡ್ಡಕಟ್ಟು, ಕಟ್ಟಿಸು, ಇಕ್ಕಟ್ಟು, ಕಟ್ಟಡ. ಪಡು=ಏರ್ಪಡು, ಹಿಂಬಡು, ಮುಂಬಡು, ಪಾಡು, ಪಾಟು, ಪಟ್ಟು, ಪಡವೆ, ಪಡುವ, ಪಡೆಯ.

ತಿಂಗಳುಗಳು.

ಚೈತ್ರ	ಆಶ್ವೀಜ
ವೈಶಾಖ	ಕಾರ್ತೀಕ
ಜ್ಯೇಷ್ಠ	ಮಾರ್ಗಶಿರ
ಆಷಾಢ	ಪುಷ್ಯ
ಶ್ರಾವಣ	ಮಾಘ
ಭಾದ್ರಪದ	ಫಾಲ್ಗುಣ

ರಾಶಿಗಳು.

ಮೇಷ	ತುಲಾ
ವೃಷಭ	ವೃಶ್ಚಿಕ
ಮಿಥುನ	ಧನು
ಕರ್ಕಾಟಕ	ಮಕರ
ಸಿಂಹ	ಕುಂಭ
ಕನ್ನೆ	ಮೀನ

ಸಂವತ್ಸರದ ಹೆಸರುಗಳು.

ಪ್ರಭವ	ಚಿತ್ರಭಾನು	ಹೇವಿಳಂಬಿ	ಪರಿಧಾವಿ
ವಿಭವ	ಸ್ವಭಾನು	ವಿಳಂಬಿ	ಪ್ರಮಾದೀಚ
ಶುಕ್ಲ	ತಾರಣ	ವಿಕಾರಿ	ಆನಂದ
ಪ್ರಮೋದೂತ	ಪಾರ್ಥಿವ	ಶಾರ್ವರಿ	ರಾಕ್ಷಸ
ಪ್ರಜೋತ್ಪತ್ತಿ	ವ್ಯಯ	ಪ್ಲವ	ನಳ
ಆಂಗೀರಸ	ಸರ್ವಜಿತು	ಶುಭಕೃತು	ಪಿಂಗಳ
ಶ್ರೀಮುಖ	ಸರ್ವಧಾರಿ	ಶೋಭಕೃತು	ಕಾಳಯುಕ್ತಿ
ಭಾವ	ವಿರೋಧಿ	ಕ್ರೋಧಿ	ಸಿದ್ಧಾರ್ಥಿ
ಯುವ	ವಿಕೃತಿ	ವಿಶ್ವಾವಸು	ರೌದ್ರಿ
ಧಾತು	ಖರ	ಪರಾಭವ	ದುರ್ಮತಿ
ಈಶ್ವರ	ನಂದನ	ಪ್ಲವಂಗ	ದುಂದುಭಿ
ಬಹುಧಾನ್ಯ	ವಿಜಯ	ಕೀಲಕ	ರುಧಿರೋದ್ಗಾರಿ
ಪ್ರಮಾದಿ	ಜಯ	ಸೌಮ್ಯ	ರಕ್ತಾಕ್ಷಿ
ವಿಕ್ರಮ	ಮನ್ಮಥ	ಸಾಧಾರಣ	ಕ್ರೋಧನ
ವಿಷು	ದುರ್ಮುಖಿ	ವಿರೋಧಿಕೃತು	ಕ್ಷಯ

ಇಂಗ್ಲಿಷ ತಿಂಗಳುಗಳು.

ಜನವರಿ (೩೧ದಿನ)=ಪುಷ್ಯ ಮತ್ತು ಮಾಘ.	ಜುಲಾಯಿ (೩೧)=ಆಷಾಢ; ಶ್ರಾವಣ.
ಫೆಬ್ರುವರಿ (೨೮; ೨೯)=ಮಾಘ; ಫಾಲ್ಗುಣ.	ಆಗೊಸ್ತು (೩೧)=ಶ್ರಾವಣ; ಭಾದ್ರಪದ.
ಮಾರ್ಚ್ (೩೧)=ಫಾಲ್ಗುಣ; ಚೈತ್ರ	ಸಪ್ತಂಬರ (೩೦)=ಭಾದ್ರಪದ; ಆಶ್ವೀಜ.
ಎಪ್ರಿಲ್ (೩೦)=ಚೈತ್ರ; ವೈಶಾಖ.	ಒಕ್ತೋಬರ (೩೧)=ಆಶ್ವೀಜ; ಕಾರ್ತೀಕ.
ಮೇ (೩೧)=ವೈಶಾಖ; ಜ್ಯೇಷ್ಠ.	ನವಂಬರ (೩೦)=ಕಾರ್ತೀಕ; ಮಾರ್ಗಶಿರ.
ಜೂನ್ (೩೦)=ಜ್ಯೇಷ್ಠ; ಆಷಾಢ.	ದಶಂಬರ (೩೧)=ಮಾರ್ಗಶಿರ; ಪುಷ್ಯ.

೧. ಅ ಇ ದು 1.

ಇದು	ಅದು	ಅದು	ಇದು

೨. ವ 2.

ಅದು	ಅವ	ಇದು	ಇವ
ಇವ	ಅದು	ಅವ	ಇದು

೩. ನ 3.

ವನ.	ಇದು ವನ.
ಅವನ.	ಅವನದು.
ಅದು ವನ.	ವನ ಇದು.
ಇವನ	ಇವನದು.
ಇದು ಅವನದು.	ಅದು ಇವನದು.
ಅದು ಅವನದು.	ಇದು ಇವನದು.
ಅವನದು ಇದು.	ಇವನದು ಅದು.

೪. ನ್ನ 4.

ಅನ್ನ.	ಅನ್ನ ಇದು.
ನನ್ನ.	ನನ್ನ ಅನ್ನ.
ಅದು ಅನ್ನ.	ಅವನ ಅನ್ನ.
ಇವನ ಅನ್ನ.	ಇದು ಇವನ ಅನ್ನ.
ಅದು ನನ್ನ ಅನ್ನ.	ನನ್ನ ಅನ್ನ ಇದು.
ಅನ್ನ ಅವನದು.	ವನ ಇದು.
ನವ ಅನ್ನ ಇದು.	ಅನ್ನ ಇವನದು.
ಇವನ ಅನ್ನ ಇದು.	ಅವನ ಅನ್ನ ಅದು.